*ಅಪೊಸ್ತಲನಾದ ಪೇತ್ರನು ಬರೆದಿರುವ*

# ಪೇತ್ರನು ಎರಡನೆಯ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಮೂಲ ಅಪೊಸ್ತಲರಲ್ಲಿ ಒಬ್ಬನಾದ ಪೇತ್ರನು.

**ದಿನಾಂಕ:**

ಕ್ರಿ.ಶ 67 ರ ಸುಮಾರಿನಲ್ಲಿ.

**ಧ್ಯೇಯಗಳು:**

ಪೇತ್ರನು ತನ್ನ ಮರಣದ ಸಮಯ ಹತ್ತಿರವಾಗಿದೆ ಎಂಬದು ತಿಳಿದಿತ್ತು (1:13-15). ವಿಶ್ವಾಸಿಗಳಿಗೆ ಈಗಾಗಲೇ ಅವರು ಕಲಿತುಕೊಂಡಿರುವದನ್ನು ಜ್ಞಾನಪಡಿಸುವದು ಮತ್ತು ಪ್ರೋತ್ಸಾಹಪಡಿಸುವದು (1:13; 3:1), ಸುಳ್ಳು ಬೋಧಕರ ವಿಷಯದಲ್ಲಿ ಅವರಿಗೆ ಎಚ್ಚರಿಕೆಗಳನ್ನು ಕೊಡುವದು ಮತ್ತು ಕರ್ತನಾದ ಯೇಸು ಕ್ರಿಸ್ತನ ಕೃಪೆ ಹಾಗೂ ತಿಳುವಳಿಕೆಯಲ್ಲಿ ಬೆಳೆಯಲು ಅವರಿಗೆ ಉತ್ತೇಜನ ಕೊಡುವದು ಈ ಪತ್ರಿಕೆಯನ್ನು ಬರೆಯುವದರ ಹಿಂದಿರುವ ಆತನ ಉದ್ದೇಶವಾಗಿದೆ. “ತಿಳುವಳಿಕೆ” ಈ ಪತ್ರಿಕೆಯ ಪ್ರಮುಖ ಪದವಾಗಿದೆ ಮತ್ತು 7 ಸಲ ಬರೆಯಲ್ಪಟ್ಟಿದೆ. “ತಿಳಿದುಕೊಳ್ಳಿರಿ”, “ತಿಳಿದುಕೊಳ್ಳುತ್ತಾನೆ”, “ತಿಳಿದಿರುವ” ಮತ್ತು “ತಿಳಿದುಕೊಳ್ಳುವದು” ಪದಗಳು ಸಹ 7 ಸಲ ಬರೆಯಲ್ಪಟ್ಟಿವೆ ಮತ್ತು “ತಿಳಿಯದೆ” ಎಂಬ ಪದ 3 ಸಲ ಬರೆಯಲ್ಪಟ್ಟಿದೆ. ಇವೆಲ್ಲವೂ ಕ್ರೈಸ್ತೀಯ ಜೀವಿತದ ನಿಜವಾದ ತಿಳುವಳಿಕೆ ಎಷ್ಟು ಪ್ರಾಮುಖ್ಯ ಎಂಬದನ್ನು ಪೇತ್ರನು ಅರಿತಿದ್ದನು ಎಂಬದನ್ನು ಸೂಚಿಸುತ್ತವೆ.

# 1 1

- **1:1** 1 ಪೇತ್ರ 1:1.

“*ಸಿಮೆಯೋನ*”– ಮತ್ತಾಯ 4:18; 10:2.

“*ದಾಸನು*”– ರೋಮಾ 1:1. ಪೇತ್ರನು ಕರ್ತನಾದ ಯೇಸು ಕ್ರಿಸ್ತನನ್ನು “ನಮ್ಮ ದೇವರು ಮತ್ತು ರಕ್ಷಕನು” ಎಂಬದಾಗಿ ಕರೆದಿರುವದನ್ನು ಗಮನಿಸಿರಿ. ಇದು ಗ್ರೀಕ್ ಭಾಷೆಯ ಅಕ್ಷರಾರ್ಥ ಭಾಷಾಂತರವಾಗಿದೆ ಮತ್ತು ಯೇಸು ಕ್ರಿಸ್ತನ ದೈವೀಕತೆಯನ್ನು ಕೆಜೆವಿ ಗಿಂತ ಉತ್ತಮವಾಗಿ ವ್ಯಕ್ತಪಡಿಸುತ್ತದೆ. ಗ್ರೀಕ್ ವಚನವನ್ನು 11ನೇ ವಚನದಲ್ಲಿರುವ ಹಾಗೆಯೇ ಕೊಡಲಾಗಿದೆ – “ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನು”. ಯೇಸು ಕ್ರಿಸ್ತನ ದೈವೀಕತೆಯ ಬಗ್ಗೆ

ತಿಳಿಯಲು ತೀತ 2:13; ಫಿಲಿಪ್ಪಿ 2:6; ಇಬ್ರಿ 1:3,8,10; ಯೋಹಾನ 20:28 ನೋಡಿರಿ.

*"ಅಮೂಲ್ಯವಾದ"*– ನಂಬಿಕೆಯು ನಿಜವಾಗಿಯೂ ಅತ್ಯಂತ ಅಮೂಲ್ಯವಾದದ್ದಾಗಿದೆ (1 ಪೇತ್ರ 1:7). ನಂಬಿಕೆಯಿರುವವರು ಅದನ್ನು "ಸಂಪಾದಿಸಿಕೊಂಡಿದ್ದಾರೆ" ಅಥವಾ "ಹೊಂದಿಕೊಂಡಿದ್ದಾರೆ". ಬೇರೆ ಮಾತುಗಳಲ್ಲಿ ಹೇಳುವದಾದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದು ದೇವರಿಂದ ದೊರೆಯುವ ವರವಾಗಿದೆ (ಅಪೊ 3:16; ಎಫೆ 2:8; ಫಿಲಿಪ್ಪಿ 1:29).

*"ನೀತಿಯಿಂದ"*– ರೋಮಾ 3:20-26. **2**

**- 1:2** ರೋಮಾ 1:7.

*"ಹೆಚ್ಚಾಗಲಿ"*– 1 ಪೇತ್ರ 1:2. ಕೃಪೆ ಮತ್ತು ಸಮಾಧಾನವು ವಿಶ್ವಾಸಿಗಳಿಗೆ ಯಾವ ರೀತಿಯಲ್ಲಿ ದೊರೆಯುತ್ತವೆ ಎಂಬದನ್ನು ಗಮನಿಸಿರಿ. ಯೋಹಾನ 17:3 ರೊಂದಿಗೆ ಹೋಲಿಸಿ ನೋಡಿರಿ. ನಾವು ತಂದೆ ಮತ್ತು ಮಗನನ್ನು ಎಷ್ಟು ಚೆನ್ನಾಗಿ ತಿಳಿದುಕೊಳ್ಳುತ್ತೇವೋ, ನಮ್ಮ ಸಮಾಧಾನವು ಅಷ್ಟು ಹೆಚ್ಚಾಗಿರುತ್ತದೆ, ನಾವು ದೇವರ ಕೃಪೆಯನ್ನು ಅಷ್ಟು ಹೆಚ್ಚಾಗಿ ಹೊಗಳುತ್ತೇವೆ. ನಾವು ದೇವರನ್ನು ಉತ್ತಮವಾಗಿ ತಿಳಿದುಕೊಳ್ಳಬೇಕು ಮತ್ತು ಆತನ ಕೃಪೆಯನ್ನು ಉಪಯೋಗಿಸಿಕೊಳ್ಳಬೇಕು ಎಂಬದು ಆತನ ಬಯಕೆಯಾಗಿದೆ (3:18). ವಿಶ್ವಾಸಿಗಳು ದೇವರನ್ನು ಉತ್ತಮವಾಗಿ ತಿಳಿದುಕೊಳ್ಳಬೇಕೆಂದು ಪೌಲನು ಯಾವಾಗಲೂ ಪ್ರಾರ್ಥನೆ ಮಾಡುತ್ತಾ ಇದ್ದನು – ಎಫೆ 1:17; 3:19; 4:13; ಫಿಲಿಪ್ಪಿ 1:9-10; ಕೊಲೊ 1:9-12. **3**

**1:3** *"ಆತನ ದಿವ್ಯ ಶಕ್ತಿ"*– ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನು ಸೂಚಿಸುತ್ತದೆ. ಆತನ ದಿವ್ಯಶಕ್ತಿಯುಳ್ಳವನಾಗಿದ್ದಾನೆ ಯಾಕಂದರೆ ಆತನೇ ದೇವರು. ಕ್ರೈಸ್ತೀಯ ಜೀವಿತವನ್ನು ಜೀವಿಸಬೇಕಾದ ರೀತಿಯಲ್ಲಿ ಜೀವಿಸಲು ಆತನು ನಮಗೆ ಬೇಕಾಗಿರುವ ಎಲ್ಲವನ್ನು ಕೊಟ್ಟಿದ್ದಾನೆ. ಎಫೆ 1:3 ರೊಂದಿಗೆ ಹೋಲಿಸಿ ನೋಡಿರಿ. ಜ್ಞಾನ ಮತ್ತು ಶಕ್ತಿ, ಪರಿಶುದ್ಧತೆ ಮತ್ತು ಬಲದ ಸಂಪನ್ಮೂಲಗಳೆಲ್ಲವೂ ಆತನಲ್ಲಿವೆ, ಹಾಗೂ ಆತನು ಎಲ್ಲಾ ವಿಶ್ವಾಸಿಗಳಲ್ಲಿ ಇದ್ದಾನೆ (ರೋಮಾ 8:9-10; 2 ಕೊರಿಂಥ 13:5; ಕೊಲೊ 1:27; 2:3).

*"ಭಕ್ತಿ"*– 1 ತಿಮೊ 2:2; 3:16; 4:8; 6:5-6,11; ತೀತ 1:1.

*"ಕರೆದ"*– 1 ಪೇತ್ರ 1:15; 2:9,21; 3:9; 5:10 (ರೋಮಾ 1:6; 8:30 ರ ನೋಟ್ಸ್ ನೋಡಿರಿ).

*"ಮಹಿಮೆ"*– ಯೋಹಾನ 1:14; 17:5.

*"ಗುಣಾತಿಶಯ"*– 1 ಪೇತ್ರ 2:9 ರಲ್ಲಿ ಈ ಗ್ರೀಕ್ ಪದವನ್ನು "ಗುಣಾತಿಶಯ" ಎಂಬದಾಗಿಯೇ ಭಾಷಾಂತರ ಮಾಡಲಾಗಿದೆ. ಇದರ ಅರ್ಥ ಅದ್ಭುತವಾದ ಗುಣಗಳು, ಹೊಗಳಿಕೆಗೆ ಅರ್ಹವಾದವುಗಳು – ವಿಮೋ 33:19; ನೆಹೆ 9:25; ಕೀರ್ತನೆ 17:13; 31:19;

145:7; 1 ಪೇತ್ರ 2:3. **4**

**1:4** *"ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು"*– ಹೊಸ ಒಡಂಬಡಿಕೆ, ಇಡೀ ಸತ್ಯವೇದವು ಇವುಗಳನ್ನು ಹೊಂದಿವೆ.

*"ಅವುಗಳ ಮೂಲಕ"*– ನಾವು ಈ ವಾಗ್ದಾನಗಳನ್ನು ಹುಡುಕಬೇಕು, ನಂಬಬೇಕು, ಧ್ಯಾನಿಸಬೇಕು, ದೇವರು ನಮಗೆ ಕೊಟ್ಟಿರುವ ಕಾರ್ಯಗಳನ್ನು ಹೊಂದಲು ಅವುಗಳನ್ನು ಉಪಯೋಗಿಸಬೇಕು. ಇಲ್ಲವಾದರೆ ದೇವರು ನಾವು ಅನುಭವಿಸಬೇಕೆಂದು ಬಯಸುವ ಆಶೀರ್ವಾದದ ಫಲಿತಾಂಶಗಳನ್ನು ನಮ್ಮ ಜೀವಿತಗಳಲ್ಲಿ ಕಾಣಲು ಆಗುವದಿಲ್ಲ. ದೇವರ ವಾಕ್ಯ ಮತ್ತು ಆತನ ವಾಗ್ದಾನಗಳಲ್ಲಿ ನಂಬಿಕೆಯುಳ್ಳವರಾಗಿ ನಾವು ಪಾಪವನ್ನು, ಸೈತಾನನನ್ನು ಮತ್ತು ಲೋಕವನ್ನು ಜಯಿಸುತ್ತೇವೆ ಹಾಗೂ ನಂಬಿಕೆಯಿಂದ ನಾವು ಕ್ರಿಸ್ತನೊಂದಿಗೆ ಜೀವಿಸುತ್ತಾ ಆತನ ಸೇವೆಯನ್ನು ಮಾಡುತ್ತೇವೆ.

*"ದೈವ ಸ್ವಭಾವದಲ್ಲಿ ಪಾಲುಗಾರರು"*– ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ದೇವರುಗಳಾಗುವದಿಲ್ಲ. ಇದು ಯಾವನೇ ಮಾನವನಿಗಾದರೂ, ಸೃಷ್ಟಿಯಾಗಿರುವವನಿಗಾದರೂ ಅಸಾಧ್ಯವಾದ ಕಾರ್ಯವಾಗಿದೆ. ಆದರೆ ವಿಶ್ವಾಸಿಗಳು ಯೇಸು ಕ್ರಿಸ್ತನೊಂದಿಗೆ ಐಕ್ಯರಾಗಿದ್ದಾರೆ; ಅವರು ಆತನಲ್ಲಿದ್ದಾರೆ ಮತ್ತು ಆತನು ಅವರಲ್ಲಿದ್ದಾನೆ ಹಾಗೂ ದೇವರಾತ್ಮನು ಅವರಲ್ಲಿದ್ದಾನೆ (ಯೋಹಾನ 14:17; 17:20-23). ಈ ಅರ್ಥದಲ್ಲಿ ಅವರು ದೈವ ಸ್ವಭಾವದಲ್ಲಿ ಪಾಲುಗಾರರಾಗಿದ್ದಾರೆ.

*"ತಪ್ಪಿಸಿಕೊಂಡು"*– ಒಂದುವೇಳೆ ನಾವು ಲೋಕದ ಕೆಟ್ಟತನದಿಂದ ತಪ್ಪಿಸಿಕೊಳ್ಳದೆ ಇದ್ದರೆ ಲೋಕದ ಮೇಲೆ ಬರುವ ದೇವರ ಕೋಪದಿಂದ ತಪ್ಪಿಸಿಕೊಳ್ಳಲು ನಮ್ಮಿಂದ ಆಗುವದಿಲ್ಲ (ಮತ್ತಾಯ 23:33; ರೋಮಾ 2:3; 1 ಥೆಸ 5:3; 2 ತಿಮೊ 2:26; ಇಬ್ರಿ 2:3; 12:25). ದೇವರ ವಾಗ್ದಾನಗಳಲ್ಲಿ ನಂಬಿಕೆಯಿಟ್ಟರೆ ಮಾತ್ರವೇ ನಾವು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

*"ಕೆಟ್ಟತನ"*– ಆದಿ 6:11-12; ಕೀರ್ತನೆ 14:3; ಯೆಶಾಯ 1:4; ಅಪೊ 2:40; ಎಫೆ 4:22.

*"ಕೆಟ್ಟ ಬಯಕೆ"*– ಲೋಕದ ಕೆಟ್ಟತನಗಳೆಲ್ಲವೂ ಮಾನವನ ಹೃದಯಕ್ಕೆ ಸಂಬಂಧಿಸಿದವುಗಳಾಗಿವೆ. ಯಾಕೋಬ 1:14-15; 4:1-2 ನೋಡಿರಿ. ಪೇತ್ರನು 1 ಪೇತ್ರ 1:14; ಮತ್ತು 2:11 ರಲ್ಲಿ ಕೊಟ್ಟಿರುವ ಬುದ್ಧಿವಾದಗಳಿಗೆ ನಾವೆಲ್ಲರೂ ವಿಧೇಯರಾಗಬೇಕು. ದೇವರ ಮಹದಾದ ಮತ್ತು ಅಮೂಲ್ಯವಾದ ವಾಗ್ದಾನಗಳು ನಾವು ಕೆಟ್ಟತನದಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳುವಂತೆ ನಮಗೆ ಸಹಾಯ ಮಾಡುತ್ತವೆ. ಅವುಗಳನ್ನು ಉಪಯೋಗಿಸೋಣ. **5-7**

**1:5-7** ಯೇಸು ಕ್ರಿಸ್ತನು ನಮಗೆ ಬೇಕಾಗಿರುವವುಗಳನ್ನೆಲ್ಲಾ ಕೊಟ್ಟಿರುವದರಿಂದ, ಆತನು ಕೊಟ್ಟಿರುವವುಗಳನ್ನು ನಾವು ಬಿಗಿಯಾಗಿ ಹಿಡಿದುಕೊಳ್ಳಬೇಕು ಮತ್ತು ಕ್ರೈಸ್ತೀಯ ಜೀವಿತದ

ಎಲ್ಲಾ ಒಳ್ಳೆಯ ಗುಣಗಳಲ್ಲಿ ಬೆಳೆಯಲು ಆಸಕ್ತವಾದ ಪ್ರಯತ್ನವನ್ನು ನಡೆಸಬೇಕು. **5**

**1:5** *"ಕೂಡಿಸಿರಿ"*– ಆತನ ಮಾತಿನ ಅರ್ಥ ನಾವು ಒಂದು ಗುಣವನ್ನು ಹೊಂದುವ ಮೊದಲು ಇನ್ನೊಂದು ಗುಣವನ್ನು ಸೇರಿಸುವ ಸಲುವಾಗಿ ಆತನು ಕಾಯುವದಿಲ್ಲ. ನಾವು ಆತ್ಮೀಕ ಜೀವನದಲ್ಲಿ ಬೆಳೆಯುವಾಗ ಈ ಗುಣಗಳೆಲ್ಲಾ ಒಂದೊಂದಾಗಿ ಕೂಡಿಸಲ್ಪಡಬೇಕು. ಇವುಗಳನ್ನು ನಾವು ಕೂಡಿಸಿಕೊಳ್ಳುವದು ಹೇಗೆ? ದೇವರ ವಾಗ್ದಾನಗಳನ್ನು ನಂಬಿಕೆ, ಸ್ವ-ಪರೀಕ್ಷೆ, ಪ್ರಾರ್ಥನೆ ಮತ್ತು ದೇವರ ವಾಕ್ಯದ ಧ್ಯಾನ, ಆತನ ವಾಕ್ಯಗಳನ್ನು ಸರಳವಾಗಿ ಅಳವಡಿಸಿಕೊಳ್ಳುವದು – ಈ ಎಲ್ಲಾ ಕಾರ್ಯಗಳನ್ನು ನಾವು ಯೇಸು ಕ್ರಿಸ್ತನನ್ನು "ಧರಿಸಿಕೊಂಡು" –ನೂತನ ಸ್ವಭಾವವುಳ್ಳವರಾಗಿ ಮಾಡಬೇಕು (ಕೀರ್ತನೆ 1:1-3; ಲೂಕ 11:28; ರೋಮಾ 13:14; 2 ಕೊರಿಂಥ 5:7; ಎಫೆ 4:22-24).

*"ನಂಬಿಕೆ"*– ಇದರ ಮೂಲಕವೇ ಎಲ್ಲವೂ ಪ್ರಾರಂಭವಾಗಬೇಕು. ಇದಿಲ್ಲದೆ ಹೋದರೆ, ಖಂಡಿತವಾಗಿಯೂ ನಾವು ನಿಜವಾದ ಕ್ರೈಸ್ತರೇ ಅಲ್ಲ ಮತ್ತು ಒಂದುವೇಳೆ ನಾವು ಇತರೆ ಗುಣಗಳನ್ನು ಸೇರಿಸಿಕೊಂಡರೂ ಅವುಗಳಿಂದ ಶಾಶ್ವತವಾದ ಯಾವುದೇ ಪ್ರಯೋಜನವಾಗುವದಿಲ್ಲ – ಇಬ್ರಿ 11:6; ಯೋಹಾನ 3:36.

*"ಸದ್ಗುಣ"*– ವ 3. ಗ್ರೀಕ್ ಪದವು ಅದ್ಭುತವಾದ ನೈತಿಕ, ನೀತಿಯುಳ್ಳ, ಒಳ್ಳೆಯ ಗುಣವನ್ನು ವ್ಯಕ್ತಪಡಿಸುತ್ತದೆ.

*"ಜ್ಞಾನ"*– ವ 2. ಇದನ್ನು ಒಮ್ಮೆಲೇ ಶಾಶ್ವತವಾಗಿ ಕೂಡಿಸಿಕೊಳ್ಳಲು ಆಗುವದಿಲ್ಲ. ವಿಶ್ವಾಸಿಗಳು ಸತತವಾಗಿ ಜ್ಞಾನದಲ್ಲಿ ಬೆಳವಣಿಗೆಯನ್ನು ಹೊಂದಬೇಕು – 3:18; ಫಿಲಿಪ್ಪಿ 3:10 – ಆದರೆ ಅದನ್ನು ಕೂಡಿಸಿಕೊಳ್ಳಲು ನಾವು ಪ್ರಾರಂಭಿಸಬಹುದು. **6**

**1:6** *"ದಮೆ"*– ಇದು ದೇವರಾತ್ಮನ ಫಲವಾಗಿದೆ (ಗಲಾ 5:23). ನಾವು ದೇವರಾತ್ಮನಿಗೆ ಅಧೀನರಾಗುವ ಮತ್ತು ಆತ್ಮನಲ್ಲಿ ಜೀವಿಸುವ ಮೂಲಕ ಹಾಗೂ ನಮ್ಮ ಆಲೋಚನೆಗಳು, ಬಯಕೆಗಳು ಮತ್ತು ಕ್ರಿಯೆಗಳನ್ನು ನಿಯಂತ್ರಣಕ್ಕೆ ತರಲು ದೇವರಾತ್ಮನು ನಮಗೆ ಕೊಡುವ ಬಲವನ್ನು ಉಪಯೋಗಿಸುವ ಮೂಲಕ ನಾವು ಇದನ್ನು ಕೂಡಿಸಿಕೊಳ್ಳಬಹುದು.

*"ತಾಳ್ಮೆ"*– ಎಂದರೆ ನಮಗೆ ಯಾವುದೇ ರೀತಿಯ ಕಷ್ಟ ಸಂಕಟಗಳು ಎದುರಾದರೂ ನಂಬಿಕೆಯಿಂದ ಮುಂದೆ ಸಾಗುವದಾಗಿದೆ. ಇದು ಸ್ವಾಭಾವಿಕವಾಗಿ ನಮಗೆ ಬರುವದಿಲ್ಲ. ಇದನ್ನು "ಕೂಡಿಸಿಕೊಳ್ಳುವದು" ಹೇಗೆ ಎಂಬದನ್ನು ನಾವು ಕಲಿತುಕೊಳ್ಳಬೇಕು (ಯಾಕೋಬ 1:2-4,12).

*"ಭಕ್ತಿ"*– ವ 3; 3:11. ಈ ಪದದ ಅರ್ಥ ದೇವರ ಮೇಲೆ ನಮಗಿರುವ ಭಯ ಮತ್ತು ಭಕ್ತಿಯನ್ನು ಕ್ರಿಯಾರೂಪದಲ್ಲಿ ತೋರಿಸುವದು. **7**

**1:7** *"ಸಹೋದರ ಸ್ನೇಹ"*– ರೋಮಾ 12:10; 1 ಥೆಸ 4:9; ಇಬ್ರಿ 13:1; 1 ಪೇತ್ರ 1:22. ಇದು ಜೊತೆ ವಿಶ್ವಾಸಿಗಳ ಮೇಲಿರುವ ಪ್ರೀತಿಯನ್ನು ಕ್ರಿಯೆಯಲ್ಲಿ, ಭಾವನಾತ್ಮಕವಾದ

ಆತ್ಮೀಯತೆಯಲ್ಲಿ ತೋರ್ಪಡಿಸುವದಾಗಿದೆ.

*"ಪ್ರೀತಿ"*– ದೇವರು ತನ್ನ ವಿಶ್ವಾಸಿಗಳ ಹೃದಯದಲ್ಲಿ ನೆಲೆಗೊಳಿಸುವ ದೈವೀಕವಾದ ಪ್ರೀತಿ ("ಅಗಾಪೆ" 1 ಕೊರಿಂಥ 13:1 ರ ನೋಟ್ ನೋಡಿರಿ). **8**

**1:8** *"ಹೆಚ್ಚಾಗಲಿ"*– 3:18; ಗಲಾ 5:22-23; ಎಫೆ 4:12-15; ಫಿಲಿಪ್ಪಿ 3:12-14.

*"ಆಲಸ್ಯಗಾರರು ಅಥವಾ ನಿಷ್ಫಲರು"*– ನಮ್ಮ ಕ್ರೈಸ್ತೀಯ ಜೀವಿತದಲ್ಲಿ ಅಪ್ರಯೋಜಕರು ಮತ್ತು ನಿಷ್ಫಲರೂ ಆಗಿರಲು ನಾವು ಬಯಸುವದಿಲ್ಲ, ಆದರೆ ಮೇಲೆ ತಿಳಿಸಲಾಗಿರುವ ಗುಣಗಳನ್ನು ನಾವು ಕೂಡಿಸಿಕೊಳ್ಳದೆ ಹೋದರೆ ನಾವು ಆಲಸ್ಯಗಾರರು ಹಾಗೂ ನಿಷ್ಫಲರು ಆಗುತ್ತೇವೆ. **9**

**1:9** *"ಕುರುಡನು ದೂರದೃಷ್ಟಿಯಿಲ್ಲದವನು"*– ಕುರುಡನು ಎಂದರೆ, ಅನೇಕ ಆತ್ಮೀಕ ಸತ್ಯಗಳು, ಅದ್ಭುತ ಕಾರ್ಯಗಳನ್ನು ನೋಡಲು ಆಗದವನಾಗಿದ್ದಾನೆ. ಎಫೆ 1:18-19 ರಲ್ಲಿ ಪೌಲನು ಮಾಡಿರುವ ಪ್ರಾರ್ಥನೆಯನ್ನು ಗಮನಿಸಿರಿ. ದೂರದೃಷ್ಟಿಯಿಲ್ಲದವರು ಸಂಪೂರ್ಣವಾಗಿ ಕುರುಡರಲ್ಲ. ಅವರು ಈ ಲೋಕದ ಕಾರ್ಯಗಳನ್ನು ಅಂದರೆ ತಮ್ಮ ಸುತ್ತಮುತ್ತಲಿನಲ್ಲಿರುವ ಕಾರ್ಯಗಳನ್ನು ನೋಡಬಲ್ಲರು, ಆದರೆ ಪೌಲನು 2 ಕೊರಿಂಥ 4:18 ರಲ್ಲಿ ಹೇಳಿರುವ ರೀತಿಯ ದೂರದೃಷ್ಟಿಯಿಲ್ಲದವರಾಗಿದ್ದಾರೆ.

*"ಮರೆತುಬಿಟ್ಟಿದ್ದಾನೆ"*– ಪಾಪದಿಂದ ಶುದ್ಧನಾಗುವದು ಎಂದರೆ ಏನು ಎಂಬದನ್ನು ಒಂದುವೇಳೆ ಅವನು ನೆನಪಿನಲ್ಲಿಟ್ಟುಕೊಂಡಿರುವದಾದರೆ, ದೇವರು ತನ್ನನ್ನು ಉನ್ನತವಾಗಿರುವ ಪರಿಶುದ್ಧವಾದ ಜೀವನಕ್ಕೆ ಕರೆದಿದ್ದಾನೆ ಎಂಬದನ್ನು ಮನವರಿಕೆ ಮಾಡಿಕೊಳ್ಳುವನು ಹಾಗೂ 5-7 ವಚನಗಳು ಹೇಳುವ ಗುಣಗಳನ್ನು ಕೂಡಿಸಿಕೊಳ್ಳುವನು. **10**

**1:10** *"ದೇವರ ಕರೆ ಮತ್ತು ಆದುಕೊಳ್ಳುವಿಕೆ"*– ಪೇತ್ರನ ಮಾತುಗಳ ಅರ್ಥ ದೇವರು ಅವರನ್ನು ರಕ್ಷಣೆಗೆ ಆದುಕೊಂಡಿರುವದು ಮತ್ತು ಅದಕ್ಕಾಗಿ ಕರೆದಿರುವದು. ಸತ್ಯವೇದದಲ್ಲಿ "ಚುನಾವಣೆಯನ್ನು" –ಉಪಯೋಗಿಸಿರುವ ರೀತಿಯನ್ನು ನೋಡುವದಾದರೆ ದೇವಜನರನ್ನು ಒಂದೊಂದೇ ಮತದಿಂದ ಆರಿಸಿಕೊಳ್ಳಲಾಗಿದೆ ಎಂದು ತಿಳಿಯಬಹುದು-ದೇವರು-ತನ್ನ ಮತವನ್ನು ಜಗದುತ್ಪತ್ತಿಗೂ ಮೊದಲೇ ಚಲಾಯಿಸಿದ್ದಾನೆ (ಎಫೆ 1:4; 1 ಪೇತ್ರ 1:2). ಯೋಹಾನ 6:37; ರೋಮಾ 1:6; 8:28-30; ಎಫೆ 1:4-6 ರ ನೋಟ್ಸ್ ನೋಡಿರಿ). ದೇವರು ನಮ್ಮನ್ನು ಆದುಕೊಂಡಿದ್ದಾನೆ ಮತ್ತು ಕರೆದಿದ್ದಾನೆ ಎಂದು ನಾವು ದೃಢಪಡಿಸಿಕೊಳ್ಳುವದು ಹೇಗೆ? 5-7 ವಚನಗಳಲ್ಲಿ ತಿಳಿಸಲಾಗಿರುವ ಗುಣಗಳನ್ನು ಕೂಡಿಸಿಕೊಳ್ಳುವದು ಒಂದು ಕಾರ್ಯವಾಗಿದೆ. ಒಂದುವೇಳೆ ನಾವು ಕೂಡಿಸಿಕೊಂಡಿಲ್ಲವೆಂದರೆ ನಮಗೆ ದೇವರು ಕೊಡುವ ರಕ್ಷಣೆಯ ಬಗ್ಗೆ ಏನಾದರೂ ತಿಳಿದಿದೆಯೇ ಎಂಬ ಸಂದೇಹ ಉಂಟಾಗುತ್ತದೆ.

*"ಎಡಹುವದಿಲ್ಲ"*– ಒಳ್ಳೆಯ ಗುಣಗಳನ್ನು ಕೂಡಿಸಿಕೊಳ್ಳುವದರಿಂದ ದೇವರು ನಮ್ಮನ್ನು

ಆದುಕೊಂಡಿದ್ದಾನೆ ಎಂಬ ದೃಢತೆ ನಮಗುಂಟಾಗುತ್ತದೆ, ಆತನಲ್ಲಿ ನಮ್ಮ ಆತ್ಮವಿಶ್ವಾಸ ಬೆಳೆಯುತ್ತದೆ ಮತ್ತು ಅದರೊಂದಿಗೆ ದೃಢವಾಗಿ ನಿಲ್ಲುವ ನಮ್ಮ ಶಕ್ತಿಯೂ ಬೆಳೆಯುತ್ತದೆ. **11**

**1:11** *"ರಾಜ್ಯ"*– ಮತ್ತಾಯ 4:17; 5:3,10; 6:10,33; 7:21; 25:34; 1 ಥೆಸ 2:12; 2 ತಿಮೊ 4:1,18; ಇಬ್ರಿ 12:28. 5-7 ವಚನಗಳ ಒಳ್ಳೆಯ ಗುಣಗಳನ್ನು ಆಸಕ್ತಿಯಿಂದ ಕೂಡಿಸಿಕೊಳ್ಳುವ ವಿಶ್ವಾಸಿಗಳು ಯೇಸು ಕ್ರಿಸ್ತನು ಭವ್ಯವಾದ ಸ್ವಾಗತವನ್ನು ಕೊಡುವನು. ಆದರೆ ಅವುಗಳನ್ನು ಕೂಡಿಸಿಕೊಳ್ಳಲು ವಿಫಲರಾಗುವವರ ವಿಷಯ ಹೀಗಿರುವದಿಲ್ಲ. ಮತ್ತಾಯ 5:19; 2 ಕೊರಿಂಥ 5:10; ಪ್ರಕ 22:12 ರೊಂದಿಗೆ ಹೋಲಿಸಿ ನೋಡಿರಿ. **12**

**1:12** *"ಜ್ಞಾಪಕ ಮಾಡಿಕೊಳ್ಳುವದು"*– ರೋಮಾ 15:15; 1 ಕೊರಿಂಥ 15:1; 2 ತಿಮೊ 1:6; 2:14. ದೇವರು ಪ್ರಕಟಿಸಿರುವ ಸತ್ಯಗಳನ್ನು ವಿಶ್ವಾಸಿಗಳು ಜ್ಞಾಪಕದಲ್ಲಿಟ್ಟುಕೊಳ್ಳುವ ಸತತವಾದ ಅವಶ್ಯಕತೆಯಿದೆ. ಮರೆತುಹೋಗುವ ಸಾಧ್ಯತೆಯೂ ಬಹಳವಾಗಿದೆ ಅಲ್ಲದೆ ಅವುಗಳ ಫಲಿತಾಂಶಗಳು ಅತ್ಯಂತ ಅಪಾಯಕಾರಿಯಾಗಿರುತ್ತವೆ. ಧರ್ಮೋ 8:1-5 ನೋಡಿರಿ.

*"ಸ್ಥಿರವಾಗಿರುವದು"*– ಕೊಲೊ 1:23; ಲೂಕ 21:19; 1 ಕೊರಿಂಥ 16:13; 2 ಕೊರಿಂಥ 1:21,24. **13**

**1:13** *"ಗುಡಾರ"*– 2 ಕೊರಿಂಥ 5:1,4. **14**

**1:14** ಬೇರೆ ಮಾತುಗಳಲ್ಲಿ ಹೇಳುವದಾದರೆ, ಪೇತ್ರನು ತನ್ನ ಮರಣ ಸಮೀಪಿಸಿದೆ ಎಂಬದನ್ನು ಎದುರುನೋಡುತ್ತಾ ಇದ್ದನು. ಯೋಹಾನ 21:18-19 ನೋಡಿರಿ. 2 ತಿಮೊ 4:6 ರೊಂದಿಗೆ ಹೋಲಿಸಿರಿ. ನಂತರ ಪೇತ್ರನು ತನ್ನ ಜೀವಿತ ಕಾಲದಲ್ಲಿ ಯೇಸು ಕ್ರಿಸ್ತನು ಹಿಂದಿರುಗುವನು ಎಂಬದನ್ನು ಎದುರುನೋಡುತ್ತಾ ಇರಲಿಲ್ಲ. **15**

**1:15** *"ಪ್ರಯಾಸಪಡುವದು"*– ಅವನು ಆಗ ಆ ಪ್ರಯಾಸದ ಭಾಗವಾಗಿದ್ದನು ಆದರೆ ಬಹುಶಃ ಅವನ ಅರ್ಥ ಅವನು ಮೇಲಿನ ವಿಷಯಗಳ ಬಗ್ಗೆ ಹೆಚ್ಚಾಗಿ ಬರೆದು ಅವರಿಗೆ ಕಳುಹಿಸುವೆನು ಎಂಬದಾಗಿದೆ. **16**

**1:16** *"ನಾವು"*– ಅವನು ಮತ್ತು ಇತರೆ ಅಪೊಸ್ತಲರು. ಅವರು ಯೇಸು ಕ್ರಿಸ್ತನ ಸೇವೆಯ ಸಮಯದಾದ್ಯಂತ ಆತನೊಂದಿಗೆ ಇದ್ದರು ಮತ್ತು ಅನೇಕ ಸಂದರ್ಭಗಳಲ್ಲಿ ಆತನ ಅಸಾಧಾರಣವಾದ ಶಕ್ತಿಯನ್ನು ನೋಡಿದರು.

*"ಚಮತ್ಕಾರದಿಂದ ಕಲ್ಪಿಸಿದ ಕಥೆಗಳು"*– 2:3; 1 ತಿಮೊ 1:4; 4:7 ರೊಂದಿಗೆ ಹೋಲಿಸಿ ನೋಡಿರಿ.

*"ಕಣ್ಣಾರೆ ಕಂಡವರು"*– ಯೋಹಾನ 15:27; ಅಪೊ 1:3. ಆತನು ಏನು ಹೇಳಿದನು ಮತ್ತು ಮಾಡಿದನು ಎಂಬದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಸಂದೇಹಕ್ಕೆ ಯಾವುದೇ ಅವಕಾಶ ಇರಲೇ ಇಲ್ಲ.

“*ಆತನ ಮಹತ್ತು*”– ಯೋಹಾನ 1:14. ಇಲ್ಲಿ ಪೇತ್ರನು ನಿರ್ದಿಷ್ಟವಾದ ಯಾವುದೋ ಘಟನೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ – ಯೇಸು ಕ್ರಿಸ್ತನು ರೂಪಾಂತರಗೊಂಡದ್ದರ ಬಗ್ಗೆ ಇರಬಹುದು. ಮತ್ತಾಯ 17:1-2 ನೋಡಿರಿ. **17**

**1:17** ಮತ್ತಾಯ 17:5 ನೋಡಿರಿ. ದೇವರು ವಾಸಿಸುವ ಸ್ಥಳವಾದ ಪರಲೋಕದಿಂದ ವಾಣಿ ಬಂದಿತು. **18**

**1:18** ಮತ್ತಾಯ 17:6. ಪೇತ್ರನು ಯಾರ ಬಾಯಿಂದಲೋ ಕೇಳಿದ ಮಾತುಗಳನ್ನು ತಿಳಿಸುತ್ತಾ ಇಲ್ಲ. ಅವನು ಅಲ್ಲಿಯೇ ಇದ್ದನು. ಯೇಸು ಕ್ರಿಸ್ತನು ರೂಪಾಂತರ ಹೊಂದಿದ್ದನು ಅವನು ನೋಡಿದನು. ಪರಲೋಕದ ವಾಣಿಯನ್ನು ಅವನು ಕೇಳಿಸಿಕೊಂಡನು. ಮೂಲ ಅಪೊಸ್ತಲರ ಸಾಕ್ಷಿಯನ್ನು ಬಲಪಡಿಸಿದ ವಿಷಯಗಳಲ್ಲಿ ಇದೂ ಒಂದಾಗಿದೆ. ಅಪೊ 1:8; 2:32 ರೊಂದಿಗೆ ಹೋಲಿಸಿ ನೋಡಿರಿ.

“*ಪರಿಶುದ್ಧ*”– ದೇವರು ಆ ಘಟನೆಗಾಗಿ ಪರ್ವತವನ್ನು ಬೇರ್ಪಡಿಸಿದ್ದರಿಂದ ಅದು ಪರಿಶುದ್ಧವಾಯಿತು. ಯಾಜಕ 20:7 ರ ನೋಟ್ ನೋಡಿರಿ. **19**

**1:19** “*ಪ್ರವಾದನೆ*”– ಅವನ ಮಾತಿನ ಅರ್ಥ ಹಳೆಯ ಒಡಂಬಡಿಕೆಯ ಪ್ರವಾದಿಗಳ ಪ್ರವಾದನೆಗಳು. ಆದಿ 20:7 ರ ನೋಟ್ ನೋಡಿರಿ. ಅವರೂ “ಯೇಸು ಕ್ರಿಸ್ತನ ಶಕ್ತಿ ಮತ್ತು ಬರೋಣದ ಬಗ್ಗೆ ಪ್ರವಾದಿಸಿದರು” –(ವ 16; ಕೀರ್ತನೆ 2:8-9; 96:13; 98:9; ಯೆಶಾಯ 2:12-19; 13:9-11; 26:21; 62:11; 63:1-6; ದಾನಿ 7:13-14; ಜೆಕರ್ಯ 14:3-5). ಯೇಸು ಕ್ರಿಸ್ತನ ರೂಪಾಂತರವು ಅವರ ಪ್ರವಾದನೆಗಳನ್ನು ದೃಢಪಡಿಸಿತು, ಅವುಗಳು ನೆರವೇರುವವು ಎಂಬ ದೃಢತೆಯನ್ನು ವಿಶ್ವಾಸಿಗಳಿಗೆ ಒದಗಿಸಿತು. ಪ್ರವಾದಿಗಳ ಪ್ರವಾದನೆಗಳು ದೇವರು ವಿಶ್ವಾಸಿಗಳಿಗೆ ಕೊಟ್ಟಿರುವ ಬೆಳಕಾಗಿದೆ (ಕೀರ್ತನೆ 119:105; ಜ್ಞಾನೋ 6:23 ರೊಂದಿಗೆ ಹೋಲಿಸಿ ನೋಡಿರಿ). ನಾವು ಎಲ್ಲಿದ್ದೇವೆ ಮತ್ತು ಎಲ್ಲಿಗೆ ಹೋಗುತ್ತಾ ಇದ್ದೇವೆ ಎಂಬುದನ್ನು ಅದು ತೋರಿಸುತ್ತದೆ. ನಾವು ಎಡವದೆ ಮತ್ತು ಬೀಳದೆ ಮುಂದೆ ಸಾಗಲು ಸಹಾಯ ಮಾಡುತ್ತದೆ.

“*ಕತ್ತಲೆಯ ಸ್ಥಳ*”– ಕೀರ್ತನೆ 82:5; ಜ್ಞಾನೋ 4:19; ಯೋಹಾನ 1:5; 3:19; ರೋಮಾ 1:21; ಎಫೆ 4:18; 6:12; 1 ಯೋಹಾನ 2:11.

“*ಅರುಣೋದಯ*”– ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆ. ಆಗ ಭೂಮಿಯ ಪಾಪ ಮತ್ತು ಕತ್ತಲೆಯ ಸುಧೀರ್ಘವಾದ ರಾತ್ರಿ ಮುಗಿದು ಹೋಗುತ್ತದೆ – ರೋಮಾ 13:12; ಯೆಶಾಯ 60:1-3.

“*ಪ್ರಕಾಶಿಸುವ ದೀಪ*”– ಅಥವಾ “ಮುಂಜಾನೆಯ ನಕ್ಷತ್ರ” – ಪ್ರಕ 22:16. ಈ ವಚನದಲ್ಲಿ ಪೇತ್ರನು ಹಳೆಯ ಒಡಂಬಡಿಕೆಯ ಪ್ರವಾದಿಗಳನ್ನು ಅಧ್ಯಯನ ಮಾಡುವಂತೆ ಮತ್ತು ಅವರು ಹೇಳಿರುವದನ್ನು ಎಚ್ಚರಿಕೆಯಿಂದ ಗಮನಿಸುವಂತೆ ಆಗ್ರಹಿಸಿದ್ದಾನೆ. **20**

**1:20** *"ಶಾಸ್ತ್ರ"*– ಆತನು ಹಳೆಯ ಒಡಂಬಡಿಕೆಯನ್ನು ಸೂಚಿಸುತ್ತಾ ಇದ್ದಾನೆ. ಪ್ರವಾದಿಗಳು ತಾವು ನೋಡಿದ ಸಂಗತಿಗಳ ವಿಷಯದಲ್ಲಿ ತಮ್ಮ ಸ್ವಂತ ವ್ಯಾಖ್ಯಾನವನ್ನು ಬರೆಯಲಿಲ್ಲ ಮತ್ತು ನಾವು ಸಹ ಅವರು ಬರೆದಿರುವ ಕಾರ್ಯಗಳನ್ನು ನಮ್ಮ ಯುಕ್ತವಲ್ಲದ ಕಾರಣಗಳಿಂದ ಅವುಗಳನ್ನು ವ್ಯಾಖ್ಯಾನಿಸಲು ಆಗುವದಿಲ್ಲ. ಸುಳ್ಳು ಪ್ರವಾದಿಗಳು ಇದಕ್ಕೆ ತದ್ವಿರುದ್ಧವಾಗಿದ್ದಾರೆ. ಅವರು ತಮ್ಮ ಮನಸ್ಸಿಗೆ ಬಂದ ಹಾಗೆ, ಕಲ್ಪನೆಗಳ ಆಧಾರದ ಮೇರೆಗೆ ಪ್ರವಾದಿಸುತ್ತಾರೆ ಮತ್ತು ವ್ಯಾಖ್ಯಾನಿಸುತ್ತಾರೆ – ಯೆರೆ 14:14; 23:16; ಯೆಹೆಜ್ಕೇಲ 13:3. ಶಾಸ್ತ್ರದಲ್ಲಿ ಹೇಳಲಾಗಿರುವ ಪ್ರವಾದನೆಗಳು ದೇವರಿಂದ ಬಂದವುಗಳಾಗಿವೆ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳಲು ದೇವರ ಸಹಾಯವು ಅವಶ್ಯವಾಗಿದೆ. **21**

**1:21** *"ಮನುಷ್ಯರ ಚಿತ್ತದಿಂದ"*– ಅವನು ದೇವರ ಪ್ರವಾದಿಗಳು ಹೇಳಿರುವ ಪ್ರವಾದನೆಗಳು ಮತ್ತು ಹಳೆಯ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವವುಗಳನ್ನು ಸೂಚಿಸುತ್ತಾ ಇದ್ದಾನೆ. ಪ್ರವಾದಿಗಳು ತಾವಾಗಿಯೇ ಮಾತನಾಡಲು ಅಥವಾ ಬರೆಯಲು ತೀರ್ಮಾನಿಸಿಕೊಳ್ಳಲಿಲ್ಲ. ಅವರ ಪ್ರವಾದನೆಗಳು ಪರಲೋಕದಿಂದ ಬಂದವು. ಯೆರೆ 1:9 ರೊಂದಿಗೆ ಹೋಲಿಸಿ ನೋಡಿರಿ. ಅವರು ಸತ್ಯವಂತರಾಗಿ, "ಕರ್ತನ ಮಾತುಗಳನ್ನು ಆಲಿಸಿರಿ", ಅಥವಾ "ಯೆಹೋವನು ಹೀಗನ್ನುತ್ತಾನೆ" –ಎಂದು ಹೇಳುತ್ತಾ ಇದ್ದರು (ಯೆಶಾಯ 1:2,10,11; ಯೆರೆ 2:4; ಯೆಹೆಜ್ಕೇಲ 3:16-17) ಯಾಕಂದರೆ ಅವು ಸಂಪೂರ್ಣವಾಗಿ ಸತ್ಯವಾಗಿದ್ದವು. ಅವರು ಹೇಳಬೇಕಾದ ಮಾತುಗಳನ್ನು ದೇವರೇ ಅವರಿಗೆ ತಿಳಿಸುತ್ತಾ ಇದ್ದನು. ಅವರು ದೇವರ ಸತ್ಯಗಳನ್ನು ಪ್ರಕಟಿಸಲು ದೇವರಾತ್ಮನ ಕೈಗಳಲ್ಲಿ ಸಾಧನಗಳಾಗಿದ್ದರು. ಮತ್ತಾಯ 4:4; 5:17-18; ಮಾರ್ಕ 12:4-6; ಯೋಹಾನ 10:35; ಅಪೊ 4:25; 1 ಕೊರಿಂಥ 2:13; 2 ತಿಮೊ 3:16; ಇಬ್ರಿ 1:5-13; 1 ಪೇತ್ರ 1:11 ನೋಡಿರಿ. ಒಂದುವೇಳೆ ನಾವು ಸತ್ಯವೇದವನ್ನು ನಿರ್ಲಕ್ಷಿಸಿದರೆ ಜೀವಿಸುವ ದೇವರ ವಾಕ್ಯಗಳನ್ನೇ ನಿರ್ಲಕ್ಷಿಸುವವರಾಗಿದ್ದೇವೆ. ಒಂದುವೇಳೆ ಪ್ರವಾದನೆಗಳು ನಮಗೆ ತಿಳಿದಿಲ್ಲವೆಂದರೆ, ದೇವರು ಈ ಲೋಕದಲ್ಲಿ ಮುಂದೇನು ಮಾಡುವನು ಎಂಬದು ನಮಗೆ ಗೊತ್ತಾಗುವದಿಲ್ಲ ಮತ್ತು ನಾವು ತಿಳಿದುಕೊಳ್ಳಬೇಕಾಗಿರುವ ಇನ್ನೂ ಅನೇಕ ಸತ್ಯಗಳೂ ತಿಳಿಯುವದಿಲ್ಲ.

# 2[1]

**2:1** *"ಸುಳ್ಳು ಪ್ರವಾದಿಗಳು"*– ಧರ್ಮೋ 13:1-5; 18:20-22; 1 ಅರಸು 18:19-40; 22:6-7; ಯೆಶಾಯ 9:15; ಯೆರೆ 2:8; 5:31; 14:14; 28:1-9; ಯೆಹೆಜ್ಕೇಲ 13:2-7 ನೋಡಿರಿ.

*"ನಿಮ್ಮ ನಡುವೆ"*– ಮತ್ತಾಯ 7:15; 24:11; ಅಪೊ 20:29-30; ರೋಮಾ 16:17-18; ಗಲಾ 1:7; ಫಿಲಿಪ್ಪಿ 3:18; 1 ತಿಮೊ 4:1-2; 2 ತಿಮೊ 4:3; ಯಾಕೋಬ 4:1. ಹಲವಾರು

ಶತಮಾನಗಳಿಂದ ಯಶಸ್ವಿಯಾಗಿರುವ ವಿಧಾನವನ್ನು ಸೈತಾನನು ಬಿಟ್ಟುಕೊಡುವದಿಲ್ಲ. ಭೂಲೋಕದ ಮೇಲೆ ಅವನೇ ಮೊದಲನೆಯ ಸುಳ್ಳು ಪ್ರವಾದಿಯಾಗಿದ್ದಾನೆ. ಆದಿ 3:4; ಯೋಹಾನ 8:44 ನೋಡಿರಿ.

*"ಕಳ್ಳತನದಿಂದ"*– 2 ಕೊರಿಂಥ 11:13-15; ಗಲಾ 2:4; ಯೂದ 4. ಅವರು ತಮ್ಮ ಸುಳ್ಳು ಬೋಧನೆಗಳನ್ನು ಪರಿಚಯಪಡಿಸುವ ಮೊದಲು ಅತ್ಯಂತ ಬುದ್ದಿವಂತಿಕೆಯಿಂದ ಕ್ರೈಸ್ತರ ಆತ್ಮವಿಶ್ವಾಸವನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುವರು. ಅವರು ಸತ್ಯದೊಂದಿಗೆ ತಪ್ಪುಗಳನ್ನು ಬೆರಸುವದರಿಂದ ಸುಳ್ಳೇ ಹೆಚು ಆಕರ್ಷಕವಾಗಿ ಮತ್ತು ಮೋಹಕವಾಗಿ ಕಾಣುತ್ತದೆ. ಅವರಲ್ಲಿ ಅನೇಕರು ಸಭೆಗಳು ಮತ್ತು ಸಂಸ್ಥೆಗಳಿಂದ ಅಂಗೀಕರಿಸಲ್ಪಟ್ಟಿರುವ ಸಭಾಪಾಲಕರು, ಬೋಧಕರು, ಪ್ರಾಧ್ಯಾಪಕರು ಮತ್ತು ಬಿಷಪ್ ಗಳಾಗಿದ್ದಾರೆ.

*"ನಾಶನ"*– ಸುಳ್ಳು ಬೋಧನೆಗಳು ವ್ಯಕ್ತಿಗಳ ಆತ್ಮ ಮತ್ತು ಇಡೀ ಸಭೆಗಳನ್ನು ನಾಶಮಾಡುತ್ತವೆ. ಧಾರ್ಮಿಕ ಸುಳ್ಳುಗಳು ಅತ್ಯಂತ ಅಪಾಯಕಾರಿಯಾಗಿವೆ. ಸೈತಾನನ ಮೊದಲನೆಯ ಸುಳ್ಳು (ಆದಿ 3:4) ಇಡೀ ಮಾನವ ಕುಲವನ್ನು ನಾಶನದ ಹಾದಿಗೆ ಬರಮಾಡಿತು. ಅವನ ಹಿಂಬಾಲಕರು ಅನೇಕರನ್ನು ಅಲ್ಲಿಗೆ ನಡೆಸುತ್ತಾರೆ.

*"ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದು ಹೇಳುತ್ತಾರೆ"*– ಮತ್ತಾಯ 20:28; 1 ಕೊರಿಂಥ 7:23; ಗಲಾ 3:13; ಪ್ರಕ 5:9. ಯೇಸು ಕ್ರಿಸ್ತನು ತನ್ನನ್ನೇ "ಎಲ್ಲಾ ಮಾನವರ ರಕ್ಷಣೆಗಾಗಿ ಒಪ್ಪಿಸಿಕೊಟ್ಟನು" ಇವರಲ್ಲಿ ಸುಳ್ಳು ಬೋಧಕರೂ ಸೇರಿದ್ದಾರೆ. 1 ತಿಮೊ 2:6 ನೋಡಿರಿ. ಆತನು ಎಲ್ಲರಿಗಾಗಿ ತಕ್ಕ ಕ್ರಯವನ್ನು ಪಾವತಿಸಿದನು, ಒಂದುವೇಳೆ ಎಲ್ಲರೂ ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬಿದರೆ ರಕ್ಷಣೆ ಹೊಂದುವರು. ಸುಳ್ಳು ಬೋಧಕರು ಯೇಸು ಕ್ರಿಸ್ತನನ್ನು ನಿರಾಕರಿಸುತ್ತಾರೆ. ಇದರ ಅರ್ಥ ಅವರು ಆತನ ದೈವೀಕತೆಯನ್ನು ಅಥವಾ ಆತನ ಯಜ್ಞದ ಅವಶ್ಯಕತೆಯನ್ನು ನಿರಾಕರಿಸುತ್ತಾರೆ ಎಂಬದಾಗಿದೆ. ಆದರೂ ಅವರು ತಮ್ಮನ್ನು ಕ್ರೈಸ್ತರೆಂದು ಕರೆದುಕೊಳ್ಳುತ್ತಾರೆ ಮತ್ತು ಅವರ ನಿರಾಕರಣೆಗಳು ಸೂಕ್ಷ್ಮ ಹಾಗೂ ವಂಚನೆಯುಳ್ಳವುಗಳಾಗಿರುತ್ತವೆ (ರೋಮಾ 16:18 ರೊಂದಿಗೆ ಹೋಲಿಸಿ ನೋಡಿರಿ).

*"ತಮ್ಮ ಮೇಲೆ ಬರಮಾಡಿಕೊಳ್ಳುವರು"*– ಫಿಲಿಪ್ಪಿ 3:19. ಸುಳ್ಳು ಬೋಧಕರು ನಾಶನಗಳನ್ನು ಬರಮಾಡಿಕೊಳ್ಳುವವರಾಗಿದ್ದಾರೆ. ತಮ್ಮ ಹಾಳು ಮಾಡುವಂತೆ ಅವರು ದೇವರನ್ನು ಕೆಣಕುತ್ತಿದ್ದಾರೆ. ಅವರ ನಡತೆಗಳು ನ್ಯಾಯತೀರ್ಪಿಗಾಗಿ ಬೇಡುವಂಥದ್ದಾಗಿದೆ. ಅವರಿಗೆ ಏನೇ ಆದರೂ ಅವರೇ ಜವಾಬ್ದಾರರಾಗಿದ್ದಾರೆ. **2**

**2:2** *"ಅನೇಕರು ಅನುಸರಿಸುವರು"*– ಮತ್ತಾಯ 24:11; ಫಿಲಿಪ್ಪಿ 3:18.

*"ಸತ್ಯಮಾರ್ಗಕ್ಕೆ ದೂಷಣೆ ಉಂಟಾಗುವದು"*– ಯೇಸು ಕ್ರಿಸ್ತನ ಮಾರ್ಗದನುಸಾರ ಜೀವಿಸದೆ ಇರುವವರು ನಾವು ಆತನ ಮಾರ್ಗದನುಸಾರ ಜೀವಿಸುತ್ತಾ ಇದ್ದೇವೆ ಎಂಬದಾಗಿ ಹೇಳುವಾಗ,

ಯೇಸು ಕ್ರಿಸ್ತನ ಮಾರ್ಗವು ಸರಿಯಾಗಿಲ್ಲ ಎಂದು ಜನರು ಯೋಚಿಸುವಂತೆ ಮಾಡುತ್ತದೆ. ನಾವು ನಂಬುತ್ತೇವೆ ಎಂದು ಹೇಳುವ ಸುವಾರ್ತೆಗೆ ಅವರು ಅಗೌರವ ತೋರುತ್ತಾರೆ. **3**

**2:3** *"ದ್ರವ್ಯಾಶೆ"*– ವ 15; ರೋಮಾ 16:18; ಫಿಲಿಪ್ಪಿ 3:19; 1 ತಿಮೊ 6:5,10. ಅವರು ದೇವರಿಗಾಗಿ ಅಥವಾ ಇತರರಿಗಾಗಿ ಧಾರ್ಮಿಕ ಕಾರ್ಯಗಳನ್ನು ಮಾಡುವದಿಲ್ಲ ಬದಲು ತಮ್ಮ ಸ್ವಂತ ಲಾಭಕ್ಕಾಗಿ ಮಾಡುತ್ತಾರೆ.

*"ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವವರು"*– ದೇವಜನರು ಅಥವಾ ಸಭೆಯ ವಿಷಯದಲ್ಲಿ ಅವರಿಗೆ ಯಾವುದೇ ಕಾಳಜಿ ಇರುವದಿಲ್ಲ. ಯೂದನ ಹಾಗೆ ಅವರು ಹಣಕ್ಕಾಗಿ ಯಾರನ್ನು ಬೇಕಾದರೂ ಮಾರುತ್ತಾರೆ.

*"ಕಲ್ಪನೆಯ ಮಾತುಗಳನ್ನು ಹೇಳುವವರು"*– 1 ತಿಮೊ 4:1-2,7; 6:20-21; 2 ತಿಮೊ 4:3-4. ದೇವರ ವಾಕ್ಯದ ಸ್ಪಷ್ಟವಾದ ಬೋಧನೆಯು ಅಂಥವರಿಗೆ ಇಷ್ಟವಾಗುವದಿಲ್ಲ, ಆದ್ದರಿಂದ ಅವರು ತಮ್ಮದೇ ಆದ ಬೋಧನೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

*"ದಂಡನೆ"*– ದೇವರು ಅಂಥವರಿಗೆ ದಂಡನೆಯ ತೀರ್ಪನ್ನು ಆಗಲೇ ಪ್ರಕಟಿಸಿದ್ದಾನೆ ಮತ್ತು ತಕ್ಕ ಕಾಲದಲ್ಲಿ ಅವರು ಅದನ್ನು ಅನುಭವಿಸುವರು. **4**

**2:4** ಯಾರೆಲ್ಲಾ ಆತನ ಸತ್ಯದ ಪ್ರಕಾರ ನಡೆಯುವದಿಲ್ಲವೋ ಅವರನ್ನು ದೇವರು ಶಿಕ್ಷಿಸಲು ಶಕ್ತನಾಗಿದ್ದಾನೆ ಎಂಬದನ್ನು ತೋರಿಸಲು ಪೇತ್ರನು ಕೊಟ್ಟಿರುವ ಮೂರು ಉದಾಹರಣೆಗಳಲ್ಲಿ ಇದು ಮೊದಲನೆಯದಾಗಿದೆ.

*"ದೇವದೂತರು ಪಾಪ ಮಾಡಿದಾಗ"*– ಯೂದ 6. ಆದಿ 6:1-5; 16:7 ರ ನೋಟ್ಸ್ ನೋಡಿರಿ. ಪ್ರಕ 12:4,7,8 ರೊಂದಿಗೆ ಹೋಲಿಸಿ ನೋಡಿರಿ. ಭೂತಕಾಲದಲ್ಲಿ ಪರಲೋಕದಲ್ಲಿದ್ದ ದೇವದೂತರು ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದರು ಮತ್ತು ಪರಲೋಕದಿಂದ ದೊಬ್ಬಲ್ಪಟ್ಟರು. ದೇವರು ಅವರನ್ನು ಉಳಿಸಲಿಲ್ಲವಾದದ್ದರಿಂದ, ಆತನು ಸುಳ್ಳು ಬೋಧಕರನ್ನು ಉಳಿಸುವದಿಲ್ಲ ಎಂದು ನಾವು ಭರವಸೆಯುಳ್ಳವರಾಗಿರಬಹುದು.

*"ನರಕ"*– ಮೂಲ ಭಾಷೆಯಲ್ಲಿ "ಟಾರ್ಟರಸ್" ಎಂಬದಾಗಿ ಬರೆಯಲಾಗಿದೆ, ಈ ಗ್ರೀಕ್ ಪದವು ಶಿಕ್ಷೆ ವಿಧಿಸಲಾಗುವ ಸ್ಥಳವನ್ನು ಸೂಚಿಸುತ್ತದೆ.

*"ಕತ್ತಲೆ ಗುಂಡಿಗಳು"*– ವ 17 ರೊಂದಿಗೆ ಹೋಲಿಸಿ ನೋಡಿರಿ; ಮತ್ತಾಯ 25:30.

*"ನ್ಯಾಯತೀರ್ಪು"*– 1 ಕೊರಿಂಥ 6:2-3. **5**

- **2:5** ಆದಿ 6:5-8,11-13,18; 7:11-12,23.

*"ಸುನೀತಿಯನ್ನು ಸಾರುವವನಾಗಿದ್ದ ನೋಹ"*– ಸತ್ಯವೇದದಲ್ಲಿ ನೋಹನನ್ನು ಬೋಧಕನೆಂದು ಈ ಸ್ಥಳದಲ್ಲಿ ಮಾತ್ರವೇ ಕರೆಯಲಾಗಿದೆ. ಅವನು ನೀತಿವಂತನಾಗಿದ್ದನು (ಆದಿ 6:9) ಮತ್ತು ತನ್ನ ಕಾಲದವರಿಗೆ ಸುನೀತಿಯನ್ನು ಸಾರಿದನು, ಆದರೆ ಅವರು ಅವನ ಮಾತುಗಳನ್ನು ಕೇಳಿಸಿಕೊಳ್ಳಲಿಲ್ಲ. ಅವನು ಅನೇಕ ವರ್ಷಗಳ ಕಾಲ ಸೇವೆ ಮಾಡಿದರೂ

ಒಬ್ಬನೂ ಬದಲಾಗಲಿಲ್ಲ. ದೇವರು ಎಂಟು ಜನರನ್ನು ಬಿಟ್ಟರೆ ಉಳಿದ ಮಾನವರನ್ನು ಉಳಿಸದೆ ಇದ್ದಾಗ, ಆತನು ಸುಳ್ಳು ಬೋಧಕರನ್ನು ಉಳಿಸುವದಿಲ್ಲ ಎಂದು ನಾವು ದೃಢತೆಯುಳ್ಳವರಾಗಿರಬಹುದು. **6-8**

**2:6-8** ಆದಿ 19:1-29 ನೋಡಿರಿ. ಹೀಗಿರುವಾಗ ಸುಳ್ಳು ಬೋಧಕರು ಹೇಗೆ ತಪ್ಪಿಸಿಕೊಳ್ಳುತ್ತಾರೆ? **6**

**2:6** *"ಸೂಚನೆ"*– ಯೂದ 7; ಮಲಾಕಿ 4:1; ಮತ್ತಾಯ 3:10,12; 25:41. **7**

**2:7** *"ನೀತಿವಂತನಾದ ಲೋಟನು"*– ಆದಿ 18:23. ಈ ವಚನದಲ್ಲಿ ನಾವು ಅರ್ಥಮಾಡಿಕೊಳ್ಳುವದೇನೆಂದರೆ ಲೋಟನು ದೇವರನ್ನು ನಂಬಿದ್ದನು ಮತ್ತು ದೇವರು ಅವನನ್ನು ನೀತಿವಂತನೆಂದು ಎಣಿಸಿದನು (ಆದಿ 15:6 ರೊಂದಿಗೆ ಹೋಲಿಸಿ ನೋಡಿರಿ), ಆದರೆ ಸತ್ಯವೇದದಲ್ಲಿ ಇದಕ್ಕೆ ಯಾವುದೇ ದಾಖಲೆಯಿಲ್ಲ. ಲೋಟನು ಸೊದೊಮ್ ಪಟ್ಟಣದಲ್ಲಿ ಜೀವಿಸುವಾಗ ಅವನ ಆಂತರ್ಯದ ಅನುಭವ ಏನಾಗಿತ್ತು ಎಂಬದರ ಹೆಚ್ಚಿನ ಮಾಹಿತಿಯನ್ನು ಪೇತ್ರನು ನಮಗೆ ಕೊಟ್ಟಿದ್ದಾನೆ. ನೀತಿವಂತನು ಈ ಲೋಕದ ಪಾಪ ಕೃತ್ಯಗಳನ್ನು ನೋಡುವಾಗ ಅವನ ಹೃದಯದ ಏನಾಗುತ್ತದೆ ಎಂಬದನ್ನು ಅವನ ಮಾತುಗಳು ಇಲ್ಲಿ ವ್ಯಕ್ತಪಡಿಸುತ್ತವೆ. **9**

**2:9** ಹಿಂದಿನ ಎಲ್ಲಾ ಯುಗಗಳಂತೆ, ಈಗಲೂ ಮಾನವ ಕುಲವು ಎರಡು ಗುಂಪುಗಳಾಗಿ ವಿಭಜನೆಯಾಗಿದೆ – "ಭಕ್ತಿಹೀನರು" ಮತ್ತು "ಅನೀತಿವಂತರು". ಸತ್ಯವೇದದಲ್ಲಿ "ಭಕ್ತಿಯುಳ್ಳವರು" ಎಂದರೆ ಒಬ್ಬನೇ ನಿಜವಾದ ಜೀವಿಸುವ ದೇವರಲ್ಲಿ ನಂಬಿಕೆಯುಳ್ಳವರು ಮತ್ತು ಆತನಿಗೆ ತಮ್ಮನ್ನು ಸಮರ್ಪಿಸಿಕೊಂಡಿರುವವರು. ಕರ್ತನಾದ ಯೇಸು ಕ್ರಿಸ್ತನು ಮಾನವನಾಗಿ ಬಂದ ಒಬ್ಬನೇ ದೇವರು, ಆದ್ದರಿಂದ ಭಕ್ತಿಯುಳ್ಳವರು ಆತನಲ್ಲಿ ನಂಬಿಕೆಯನ್ನಿಡುತ್ತಾರೆ ಮತ್ತು ಆತನನ್ನು ಹಿಂಬಾಲಿಸುತ್ತಾರೆ. ಅನೀತಿವಂತರು ಆತನನ್ನು ನಿರಾಕರಿಸುತ್ತಾರೆ (ಆದರೂ, ಕೆಲವರು ನಾವು ಆತನಲ್ಲಿ ನಂಬಿಕೆಯುಳ್ಳವರೆಂದು ಹೇಳುತ್ತಾರೆ) ಮತ್ತು ಅವರು ನಿಜವಾಗಿಯೂ ಆತನನ್ನು ನಂಬುವದಿಲ್ಲವೆಂದು ಅವರ ಜೀವಿತಗಳೇ ಪ್ರಕಟಿಸುತ್ತವೆ.

*"ಕಷ್ಟಗಳೊಳಗಿಂದ ತಪ್ಪಿಸುವವನು"*– 1 ಕೊರಿಂಥ 10:13; ರೋಮಾ 8:35-39.

*"ನ್ಯಾಯತೀರ್ಪಿನ ದಿನ"*– ಅಪೊ 17:31.

*"ಶಿಕ್ಷಾನುಭವ"*– ಅಂತಿಮ ನ್ಯಾಯತೀರ್ಪಿನ ದಿನ ಇನ್ನೂ ಬಂದಿಲ್ಲವಾದರೂ, ಈ ಮೃತಪಟ್ಟಿರುವ ಅನೀತಿವಂತರು ಶಿಕ್ಷೆಯನ್ನು ಅನುಭವಿಸುವರು (ಲೂಕ 16:22-25).ಇ ದು ನ್ಯಾಯತೀರ್ಪಿನ ದಿನ ಬರುವ ತನಕ ಮತ್ತು ನಂತರವೂ ಮುಂದುವರೆಯುವದು. **10**

**2:10** *"ಶರೀರಭಾವದನುಸಾರ ನಡೆಯುವವರು"*– ರೋಮಾ 7:5; 8:5-8 ನೋಡುತ್ತಾರೆ.

*"ಬಂಡುತನದ ಆಶೆ"*– ಮತ್ತಾಯ 15:19; ರೋಮಾ 1:24; ಎಫೆ 4:19,22.

*“ಪ್ರಭುತ್ವ ತಿರಸ್ಕಾರ ಮಾಡುವವರು”*– ಅಂದರೆ, ಅವರ ಮೇಲೆ ಅಧಿಕಾರ ನಡೆಸುವ ಪ್ರಯತ್ನಿಸುವವರೆಲ್ಲರನ್ನೂ ತಿರಸ್ಕಾರ ಮಾಡುವವರು. ಇದು ಸಹಜವಾಗಿ ದ್ರವ್ಯಾಶೆ ಮತ್ತು ಅನೈತಿಕತೆಯೊಂದಿಗೆ ಸಾಗುತ್ತದೆ. ಈ ಕಾರ್ಯಗಳ ಪ್ರಭಾವದಡಿಯಲ್ಲಿ ಜನರು ದೇವರ ಅಥವಾ ಮಾನವರ ಅಧಿಕಾರವನ್ನು ತಿರಸ್ಕರಿಸುತ್ತಾರೆ ಯಾಕಂದರೆ ಅವರಿಂದ ಅವರ ದುಷ್ಟತನಗಳಿಗೆ ಅಡ್ಡಿಯಾಗುತ್ತಾ ಇರುತ್ತದೆ. ಅವರು ಯೇಸು ಕ್ರಿಸ್ತನ ಒಡೆತನವನ್ನು ತಿರಸ್ಕರಿಸುತ್ತಾರೆ. ಅವರು ತಮ್ಮ ಭ್ರಷ್ಟವಾದ ಬಯಕೆಗಳನ್ನು ಹಿಂಬಾಲಿಸಿದಷ್ಟು ಧೈರ್ಯವಂತರು ಮತ್ತು ಅಹಂಕಾರಿಗಳಾಗುತ್ತಾರೆ.

*“ಮಹಾಪದವಿಯವರು”*– ಅಥವಾ “ಪರಲೋಕದವರು” – ಅಂಥವರು ಕಣ್ಣಿಗೆ ಕಾಣದ ಲೋಕವನ್ನು ಕಡೆಗಣಿಸುವವರಾಗಿರುತ್ತಾರೆ. ಅವರಿಗೆ ಈ ಲೋಕವೇ ಎಲ್ಲವೂ ಆಗಿರುತ್ತದೆ. **11**

**2:11** ಯೂದ 9 ರೊಂದಿಗೆ ಹೋಲಿಸಿ ನೋಡಿರಿ. **12**

**2:12** ಎಫೆ 4:18; ಯೂದ 10 . ನಾವು ಯಾವ ವಿಷಯದಲ್ಲಿಯೂ ಅಮಾಯಕರಲ್ಲ ಎಂಬದನ್ನು ಒಪ್ಪಿಸಿಕೊಳ್ಳಲು ಬೇಕಾಗುವಷ್ಟು ದೀನತೆ ಅವರಲ್ಲಿ ಇರುವದಿಲ್ಲ. ಅವರು ತಮ್ಮ ಅಹಂಕಾರದಲ್ಲಿ ತಿಳುವಳಿಕೆಯನ್ನೂ ಮೀರಿ ಪ್ರಭಾವವುಳ್ಳ ಸತ್ಯದ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ.

*“ವಿವೇಕಶೂನ್ಯ ಪಶುಗಳು”*– ಕೀರ್ತನೆ 49:12,20; 57:4; 74:19. ಅಂಥವರಿಗೆ ಪ್ರಾಣಿಗಳಿಗಿರುವಷ್ಟು ಆತ್ಮೀಕ ತಿಳುವಳಿಕೆಯೂ ಇರುವದಿಲ್ಲ. ಅವರಿಗೆ ಬೇಕಾಗಿರುವದೆಲ್ಲವೂ ತಮ್ಮ ಶಾರೀರಿಕ ಇಚ್ಛೆಗಳು ನೆರವೇರಬೇಕು. ಅವರು ಕಾರಣಗಳನ್ನು ಕೊಡುವ ತಮ್ಮ ಸಾಮರ್ಥ್ಯದ ವಿಷಯದಲ್ಲಿ ಗರ್ವಪಡುತ್ತಾರೆ, ಆದರೆ ತಮಗೆ ಯಾವ ಸಾಮರ್ಥ್ಯವೂ ಇಲ್ಲ ಎಂಬ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. **13**

**2:13** *“ಅನೀತಿವಂತಿಕೆಯ ಪರಿಣಾಮಗಳು”*– ಗಲಾ 6:7-8; 1 ಥೆಸ 1:6.

*“ಹಗಲು”*– ತಮ್ಮ ಕೆಟ್ಟ ಬಯಕೆಗಳನ್ನು ತೀರಿಸಿಕೊಳ್ಳಲು ರಾತ್ರಿಯ ಸಮಯ ಅವರಿಗೆ ಸಾಕಾಗುವದಿಲ್ಲ. ಅವರಿಗೆ ನಾಚಿಕೆಯೇ ಇರುವದಿಲ್ಲ ಮತ್ತು ತಮ್ಮ ಪಾಪಗಳನ್ನು ಮುಚ್ಚಿಡಲು ಅವರು ಪ್ರಯತ್ನಿಸುವದಿಲ್ಲ.

*“ನಿಮ್ಮ ಸಂಗಡ ಔತಣ ಮಾಡುತ್ತಾರೆ”*– ಅಪೊ 2:42; ಯೂದ 12; 1 ಕೊರಿಂಥ 11:20-22 ರ ನೋಟ್ ನೋಡಿರಿ. **14**

**2:14** ಅವರು ಪ್ರತಿಯೊಬ್ಬ ಸ್ತ್ರೀಯನ್ನು ಕಾಮದ ದೃಷ್ಟಿಯಿಂದಲೇ ನೋಡುತ್ತಾರೆ ಮತ್ತು ಆಕೆಯನ್ನು ಹೇಗೆ ಮರಳು ಮಾಡಬಹುದು ಎಂದು ಯೋಚಿಸುತ್ತಾರೆ. ಅವರು ತಮ್ಮ ಆಲೋಚನೆ, ಬಯಕೆ ಮತ್ತು ಕ್ರಿಯೆಗಳಲ್ಲಿ ಸತತವಾಗಿ ಪಾಪ ಮಾಡುತ್ತಾರೆ. ಮತ್ತಾಯ 5:28-30 ರೊಂದಿಗೆ ಹೋಲಿಸಿ ನೋಡಿರಿ.

*“ಲೋಭ”*– ವ 3. ಅವರು ಘೋರವಾದ ಸ್ವಾರ್ಥಿಗಳು, ಸಂಪೂರ್ಣವಾಗಿ ಇತರರ ಬಗ್ಗೆ ಚಿಂತಿಸದವರಾಗಿರುತ್ತಾರೆ.

*“ಶಾಪಕ್ಕೆ ಪಾತ್ರರು”*– 1 ಕೊರಿಂಥ 16:22; ಗಲಾ 1:8-9; ಇಬ್ರಿ 6:8; ಆದಿ 4:11; ಧರ್ಮೋ 16:22; ಗಲಾ 1:8-9; ಧರ್ಮೋ 11:26-28; ಜ್ಞಾನೋ 3:33; ಯೆಶಾಯ 24:6. **15**

**2:15** *“ನೀಟಾದ ಮಾರ್ಗವನ್ನು ಬಿಟ್ಟುವರು”*– 1 ಯೋಹಾನ 2:19.

*“ಬಿಳಾಮನು”*– ಯೂದ 11. ಇವನ ಕಥೆಯನ್ನು ಅರಣ್ಯಕಾಂಡ 22-25 ಅಧ್ಯಾಯಗಳಲ್ಲಿ ನಾವು ನೋಡಬಹುದು. ಸಂಖ್ಯಾ 22:1-7,19 ರ ನೋಟ್ಸ್ ನೋಡಿರಿ. ಸುಳ್ಳು ಬೋಧಕರು ಮತ್ತು ಸುಳ್ಳು ಪ್ರವಾದಿಗಳು ದುಡ್ಡಿಗೆ ಸಿಗುತ್ತಾರೆ. ಅವರು ಹಣ ಅಥವಾ ಇತರೆ ಲೌಕಿಕ ಸೌಲಭ್ಯಗಳಿಗಾಗಿ ಮಾತನಾಡುತ್ತಾರೆ ಮತ್ತು ಜನರು ಏನು ಕೇಳಿಸಿಕೊಳ್ಳಲು ಬಯಸುತ್ತಾರೋ ಅವುಗಳನ್ನು ಕಲಿಸುವ ಮನಸ್ಸುಳ್ಳವರಾಗಿದ್ದಾರೆ. ಬಿಳಾಮನ ತಂದೆ – ಬೆಯೋರ ಬಿಳಾಮನ ತಂದೆಯ ಹೆಸರು. **16**

- **2:16** ಸಂಖ್ಯಾ 22:28-31.

*“ಹುಚ್ಚುತನ”*– ಒಬ್ಬನು ತನ್ನ ಉದ್ದೇಶಗಳು ಮತ್ತು ಆಲೋಚನೆಗಳನ್ನು ದೇವರಿಂದ ಮರೆಮಾಡಬಹುದು ಎಂದು ಯೋಚಿಸುವದು ಮತ್ತು ಆತನ ಮಾರ್ಗದಂತೆ ನಡೆಯದೆ ತನ್ನ ಸ್ವಂತ ಮಾರ್ಗದಂತೆ ನಡೆಯಲು ಮುಂದಾಗುವದು ಹುಚ್ಚುತನವಾಗಿದೆ. **17**

**2:17** *“ನೀರಿಲ್ಲದ ಬಾವಿಗಳು”*– 2 ತಿಮೊ 3:5 ರೊಂದಿಗೆ ಹೋಲಿಸಿ ನೋಡಿರಿ. ಅವರು ಹೊರಗೆ ಯೋಗ್ಯರಾಗಿ ತೋರ್ಪಡಿಸಿಕೊಳ್ಳುತ್ತಾರೆ ಆದರೆ ಒಳಗೆ ಆತ್ಮೀಕ ಜೀವನದಲ್ಲಿ ಖಾಲಿಯಾಗಿರುತ್ತಾರೆ. ಅವರು ನಾವು ದೇವರಿಗೆ ಸೇರಿದವರು ಎಂಬದಾಗಿ ಹೇಳಿಕೊಳ್ಳುತ್ತಾರೆ ಆದರೆ ದೇವರಾತ್ಮನು ಅವರೊಳಗೆ ಇರುವದಿಲ್ಲ. “ನೀರಿನ” –ವಿಷಯದಲ್ಲಿ ಯೋಹಾನ 4:13-14; 7:38-39 ನೋಡಿರಿ.

*“ಬಿರುಗಾಳಿಯಿಂದ ಬಡಿಸಿಕೊಂಡು ಹೋಗುವ ಮಂಜು”*– ಯೂದ 12. ಎಫೆ 4:14 ನೋಡಿರಿ.

*“ಕಾರ್ಗತ್ತಲೆ”*– ಅವರು ಇಲ್ಲಿ ಭೂಲೋಕದಲ್ಲಿ ಕತ್ತಲೆಯನ್ನು ಆರಿಸಿಕೊಳ್ಳುತ್ತಾರೆ (ಯೋಹಾನ 3:19-20); ಅವರು ಶಾಶ್ವತವಾಗಿ ಕತ್ತಲೆಯಲ್ಲಿಯೇ ಇರುತ್ತಾರೆ (ಮತ್ತಾಯ 8:12; 22:13; ಯೂದ 13). **18**

**2:18** *“ಹುರುಳಿಲ್ಲದ ದೊಡ್ಡದೊಡ್ಡ ಮಾತುಗಳನ್ನಾಡುತ್ತಾರೆ”*– ಭಕ್ತಿಯಿಲ್ಲದವರು ಸಹಜವಾಗಿ ಬಡಾಯಿ ಕೊಚ್ಚುವವರಾಗಿರುತ್ತಾರೆ – ಕೀರ್ತನೆ 52:1; 75:4; 94:4; ರೋಮಾ 1:30; ಗಲಾ 6:13; 2 ತಿಮೊ 3:2; ಯಾಕೋಬ 3:5. ಯಾರು ತಮ್ಮ ಕುರಿತು ಕಡಿಮೆ ಹೊಗಳಿಕೊಳ್ಳುವವರಾಗಿರುತ್ತಾರೋ ಅವರು ಹೆಚ್ಚು ಹೊಗಳಿಕೆಗೆ ಪಾತ್ರರಾಗುತ್ತಾರೆ.

*"ಅವರಿಂದ ತಪ್ಪಿಸಿಕೊಂಡವರು"*– ಸುವಾರ್ತೆಯಲ್ಲಿ ಆಸಕ್ತಿ ತೋರಿಸುವವರು ಅಥವಾ ಹೊಸದಾಗಿ ಕ್ರೈಸ್ತರಾಗಿರುವವರ ಮೇಲೆ ಈ ದುಷ್ಟ ಬೋಧಕರು ನಿಯಂತ್ರಣ ಸಾಧಿಸಲು ಮತ್ತು ಅವರನ್ನು ಹಾಳು ಮಾಡಲು ಪ್ರಯತ್ನಿಸುತ್ತಾರೆ. **19**

**2:19** *"ಸ್ವಾತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನ ಮಾಡುತ್ತಾರೆ"*– ತಮಗೆ ಇಷ್ಟವಾಗುವ ಪಾಪದ ಕಾರ್ಯಗಳನ್ನು ಮಾಡುವ ಸ್ವಾತಂತ್ರ್ಯವೊಂದೇ ಅವರಿಗೆ ಗೊತ್ತಿರುವ ಸ್ವಾತಂತ್ರ್ಯವಾಗಿದೆ. ಅವರು ದೇವರ ಕೃಪೆಯನ್ನು ತಿರುಚುತ್ತಾರೆ ಮತ್ತು ಕ್ರೈಸ್ತರು ಪಾಪದ ಕಾರ್ಯಗಳನ್ನು ಮಾಡುತ್ತಾ ಹೋದರೂ, ರಕ್ಷಣೆಯನ್ನು ಹೊಂದುತ್ತಾರೆ ಎಂಬ ನಂಬಿಕೆಯಲ್ಲಿರುತ್ತಾರೆ (ಯೂದ 4; ಗಲಾ 5:13), ಆದರೆ ಈ ವಿಷಯದಲ ಬಗ್ಗೆ ದೇವರ ವಾಕ್ಯದ ಬೋಧನೆಯನ್ನು ಕಡೆಗಣಿಸುತ್ತಾರೆ (1 ಕೊರಿಂಥ 6:9-10; ಗಲಾ 5:21,24).

*"ದಾಸರು"*– ಯೋಹಾನ 8:34-35; ರೋಮಾ 6:16. ಹಣ ಮತ್ತು ಕಣ್ಣಿನಾಸೆಗೆ ದಾಸರಾಗಿರುವವರು ಕೆಲವೊಮ್ಮೆ ಎದ್ದು ನಿಂತು ಇತರರಿಗೆ ಸ್ವಾತಂತ್ರ್ಯದ ಬಗ್ಗೆ ಬೋಧಿಸುತ್ತಾರೆ – ಅವರ ಹಾಗೆ ದಾಸತ್ವಕ್ಕೆ ಒಳಗಾಗುವ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾರೆ. **20**

**2:20** *"ಯೇಸು ಕ್ರಿಸ್ತನ ವಿಷಯವಾದ ಜ್ಞಾನ ಹೊಂದಿ . . . ತಪ್ಪಿಸಿಕೊಳ್ಳುವದು"*– ಅಂಥವರಿಗೆ ಯೇಸು ಕ್ರಿಸ್ತನ ವಿಷಯದಲ್ಲಿ ಹೆಚ್ಚು ಜ್ಞಾನ ಇರುತ್ತದೆ, ಯೂದನ ಹಾಗೆ ಅವರು ಆತನನ್ನು ಬಲ್ಲವರಾಗಿರುತ್ತಾರೆ. "ಸೋತುಹೋದರೆ" –ಎಂಬ ಪದವನ್ನು ಗಮನಿಸಿರಿ ಮತ್ತು ಇಬ್ರಿ 6:4-6; 10:26-27 ರೊಂದಿಗೆ ಹೋಲಿಸಿ ನೋಡಿರಿ. ಜನರು ಯೇಸು ಕ್ರಿಸ್ತನ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆಯುಳ್ಳವರಾಗಿರಬಹುದು, ಹೊಸ ಹಾಳೆಯನ್ನು ತಿರುವಿ ಹಾಕುವ ತೀರ್ಮಾನವನ್ನು ತೆಗೆದುಕೊಳ್ಳಬಹುದು ಮತ್ತು ಲೋಕದಲ್ಲಿರುವ ಕೆಟ್ಟತನವನ್ನು ಬಿಟ್ಟುಬಿಡಲು ಮುಂದಾಗಬಹುದು. ಇದರ ಅರ್ಥ ಅವರು ಹೊಸ ಆತ್ಮೀಕ ಜೀವನವನ್ನು ಹೊಂದಿದ್ದಾರೆ ಮತ್ತು ದೇವರಾತ್ಮನ ಮೂಲಕ ಹೊಸ ಸ್ವಭಾವ ಪಡೆದಿದ್ದಾರೆ ಎಂಬದಲ್ಲ.

*"ಮೊದಲಿಗಿಂತ ಕೆಟ್ಟದ್ದಾಗಿದೆ"*– ಮತ್ತಾಯ 12:43-45 ರೊಂದಿಗೆ ಹೋಲಿಸಿ ನೋಡಿರಿ. **21**

**2:21** ಯೇಸು ಕ್ರಿಸ್ತನ ಮಾರ್ಗ ನೀತಿ, ನೇರ ಮತ್ತು ಇಕ್ಕಟ್ಟಾದ ಮಾರ್ಗವಾಗಿದೆ (2:2,15; ಮತ್ತಾಯ 5:20; 7:13-14; ಯೆಶಾಯ 35:8; ಕೀರ್ತನೆ 15:1-5). ಈ ಮಾರ್ಗವನ್ನು ತಿಳಿದುಕೊಳ್ಳುವ ಮತ್ತು ಇದರಿಂದ ಹಿಂದೆ ಸರಿಯುವ ಸಾಧ್ಯತೆಯು ಬಹಳವಾಗಿದೆ.

*"ಪರಿಶುದ್ಧ ಆಜ್ಞೆ"*– ಮತ್ತಾಯ 4:17,19; ಮಾರ್ಕ 1:15; ಲೂಕ 24:47; ಅಪೊ 17:30. ಸುವಾರ್ತಾ ಸಂದೇಶವು ದೇವರು ಮಾನವನಿಗೆ ಕೊಟ್ಟಿರುವ ಪರಿಶುದ್ಧ ಆಜ್ಞೆಗೆ ಸಮಾನವಾಗಿದೆ. **22**

**2:22** ಮೊದಲನೆಯ ಜ್ಞಾನೋಕ್ತಿಯನ್ನು ಜ್ಞಾನೋ 26:11 ರಲ್ಲಿ ನೋಡಬಹುದು,

ಎರಡನೆಯದ ಮೂಲ ಗೊತ್ತಿಲ್ಲ. ನಿಜವಾದ ವಿಶ್ವಾಸಿಗಳು "ಕುರಿಗಳಾಗಿದ್ದಾರೆ" (ಯೋಹಾನ 10:27), ನಾಯಿಗಳು ಅಥವಾ ಹಂದಿಗಳಲ್ಲ. ಕುರಿಗಳು ತಾವು ಕಕ್ಕಿದ್ದನ್ನು ನೆಕ್ಕುವದಿಲ್ಲ ಅಥವಾ ಕೆಸರಿನಲ್ಲಿ ಹೊರಳಾಡುವದಿಲ್ಲ. ದೇವಜನರು ಪಾಪದಲ್ಲಿ ಬೀಳುವ ಸಾಧ್ಯತೆಯಿದೆ (ಯಾಕೋಬ 3:2; 1 ಯೋಹಾನ 2:1; ಗಲಾ 2:11-13; 5:17) ಆದರೆ ಅವರು ಅದರಲ್ಲಿಯೇ ಹೊರಳಾಡುತ್ತಾ ಇರುವದಿಲ್ಲ (ಜ್ಞಾನೋ 24:16; 1 ಯೋಹಾನ 3:9). ಕೆಲವರು ಯಾವುದಾದರು ಕಾರಣಕ್ಕೆ ಧಾರ್ಮಿಕರಾಗುವ ಮತ್ತು ತಮ್ಮ ಹಿಂದಿನ ಕೆಟ್ಟ ಹಾಗೂ ಅನೈತಿಕ ಅಭ್ಯಾಸಗಳನ್ನು ತ್ಯಜಿಸುತ್ತಾರೆ ಎಂಬದರ ಸ್ಪಷ್ಟ ಚಿತ್ರಣವನ್ನು ಪೇತ್ರನು ಕೊಡುತ್ತಾ ಇದ್ದಾನೆ. ಆದರೆ ಬಹುಬೇಗನೇ ಅವನ ನಿಜವಾದ ಸ್ವಭಾವವು ಹೊರಬರುತ್ತದೆ ಮತ್ತು ಅವರು ಅವುಗಳಿಗೆ ಹಿಂದಿರುಗುತ್ತಾರೆ. ನೀರಿನಿಂದ ತೊಳೆದರೂ ಹಂದಿ ಹಂದಿಯಾಗಿಯೇ ಇರುತ್ತದೆಯೇ ಹೊರತು ಬೇರೆ ಆಗುವದಿಲ್ಲ.

# 3[1]

**3:1** *"ಜ್ಞಾಪಕ ಮಾಡಿಕೊಳ್ಳುವದು"*– 1:12-15. [2]

**3:2** *"ಪ್ರವಾದಿಗಳು"*– 1:19-21.

*"ಅಪ್ಪಣೆ"*– 2:21. ಮತ್ತೊಮ್ಮೆ ಅವನು ವಿಶ್ವಾಸಿಗಳ ತಿಳುವಳಿಕೆ ಮತ್ತು ಬೆಳವಣಿಗೆಗಾಗಿ ಹಳೆ ಮತ್ತು ಹೊಸ ಒಡಂಬಡಿಕೆಯ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸಿದ್ದಾನೆ. [3]

**3:3** *"ಕುಚೋದ್ಯಗಾರರು"*– 2:12; 2 ಪೂರ್ವ 36:16; ಕೀರ್ತನೆ 1:1; 73:8; 74:22; ಜ್ಞಾನೋ 14:9; 15:12; 19:29; 21:24; ಯೆಶಾಯ 28:14; ಅಪೊ 13:41; ಯೂದ 18. ಕೆಲವರು ಬೇಕೆಂದೇ ಕ್ರೈಸ್ತರ ಉತ್ತಮವಾದ ನಂಬಿಕೆಯೊಳಗೆ ಪ್ರವೇಶಿಸುತ್ತಾರೆ. ಪುರಾವೆಯನ್ನು ಪರೀಕ್ಷಿಸುವದು ಮತ್ತು ಕೆಟ್ಟ ಬಯಕೆಗಳನ್ನು ಬಿಟ್ಟುಬಿಡುವದಕ್ಕಿಂತ ಕುಚೋದ್ಯ ಮಾಡುವದು ಸುಲಭವಾಗಿದೆ. [4]

**3:4** *"ಆತನ ಪ್ರತ್ಯಕ್ಷತೆ"*– ಮತ್ತಾಯ 24:3,30; ಯೋಹಾನ 14:3. ಈ ಕುಚೋದ್ಯಗಾರರು ಹೀಗೆ ಅಂದುಕೊಳ್ಳುತ್ತಾರೆ ಯಾಕಂದರೆ ಯೇಸು ಕ್ರಿಸ್ತನು ದೀರ್ಘ ಸಮಯವಾದರೂ ಬರಲಿಲ್ಲವಾದ್ದರಿಂದ ಆತನು ಬರುವದೇ ಇಲ್ಲ ಎಂದು ಯೋಚಿಸುತ್ತಾರೆ. [5]

**3:5** *"ಬೇಕೆಂದು ಮರೆತುಬಿಡುತ್ತಾರೆ"*– ಅವರು ತಮ್ಮ ಕೆಟ್ಟ ಬಯಕೆಗಳನ್ನು ಅನುಸರಿಸಲು ಇಷ್ಟಪಡುತ್ತಾರೆ ಮತ್ತು ಅದಕ್ಕೆ ಅಡ್ಡಿಪಡಿಸುವಂಥ ಯಾವ ಕಾರ್ಯವನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಲು ಬಯಸುವದಿಲ್ಲ. ಅವರ ನಂಬಿಕೆಗಳು ಸತ್ಯ ಸಂಗತಿಗಳ ಮೇಲೆ ಆಧಾರವಾಗಿರುವದಿಲ್ಲ ಬದಲಾಗಿ ತಾವು ಯಾವುದು ಸತ್ಯವಾಗಿರಬೇಕೆಂದು ಬಯಸುತ್ತಾರೋ ಅವುಗಳ ಮೇಲೆ ಆಧಾರವಾಗಿರುತ್ತದೆ. ರೋಮಾ 1:28 ರೊಂದಿಗೆ ಹೋಲಿಸಿ ನೋಡಿರಿ. ದೇವರ ಸತ್ಯದ ಬಗ್ಗೆ ಅವರಿಗೆ ಗೊತ್ತಿಲ್ಲದೆ ಇರುವದು ಮತ್ತು ಅವರ ಅಪನಂಬಿಕೆ

ಉದ್ದೇಶಪೂರ್ವಕವಾಗಿರುತ್ತದೆ.

*"ದೇವರ ವಾಕ್ಯದ ಮೂಲಕ"*– ಆದಿ 1:1-3,6,9, ಇತ್ಯಾದಿ; ಕೀರ್ತನೆ 33:6. **6**

**3:6** 2:5 ನೋಡಿರಿ. **7**

**3:7** *"ವಾಕ್ಯ"*– ಇಬ್ರಿ 1:3.

*"ಬೆಂಕಿ"*– ವ 12; ಯೆಶಾಯ 66:15-16; ನಹೂ 1:6; ಮಲಾಕಿ 4:1; ಪ್ರಕ 20:9. ಭೂಮ್ಯಾಕಾಶಗಳು ಬೆಂಕಿಯಿಂದ ಯಾವಾಗ ನಾಶವಾಗುತ್ತವೆ? ರಕ್ಷಣೆಹೊಂದದೆ ಇರುವವರ ನ್ಯಾಯವಿಚಾರಣೆಯ ಸಮಯದಲ್ಲಿ ಆಗುತ್ತದೆ, ಅದಕ್ಕಿಂತ ಮುಂಚೆ ಆಗುವದಿಲ್ಲ (ಪ್ರಕ 20:11-15 ನೋಡಿರಿ). ಮತ್ತಾಯ 19:28; ಅಪೊ 3:21; ರೋಮಾ 8:19-21 ರೊಂದಿಗೆ ಹೋಲಿಸಿ ನೋಡಿರಿ. **8-9**

**3:8-9** ಮಾನವರಿಗೆ ಯೇಸು ಕ್ರಿಸ್ತನು ಹಿಂದಿರುಗಿ ಬರುವದಾಗಿ ವಾಗ್ದಾನ ಮಾಡಿ ಬಹಳ ಸಮಯವೇ ಆಗಿದೆ ಎಂದು ಅನ್ನಿಸುತ್ತದೆ. ಆದರೆ ದೇವರು ನಮ್ಮ ಹಾಗೆ ಸಮಯವನ್ನು ನೋಡುವದಿಲ್ಲ, ಆತನಿಗೆ ಅದು ಎರಡು ದಿನ ಅಥವಾ ಅದಕ್ಕಿಂತಲೂ ಕಡಿಮೆಯಾಗಿದೆ. ಕೀರ್ತನೆ 90:4 ಮತ್ತು ನೋಟ್ ನೋಡಿರಿ. ಒಂದುವೇಳೆ ಆತನು 2000 ವರ್ಷಗಳು (ಅಥವಾ ಹೆಚ್ಚು) ಕಾಯುತ್ತಾ ಇದ್ದಾನೆ ಅಂದರೆ, ನಮ್ಮ ಅನಿಸಿಕೆಯ ಪ್ರಕಾರ ಯೇಸು ಕ್ರಿಸ್ತನನ್ನು ಮತ್ತೆ ಕಳುಹಿಸುವ ಮೊದಲು, ಆತನು ಮನಸ್ಸಿನಲ್ಲಿ ಒಳ್ಳೆಯ ಉದ್ದೇಶವುಳ್ಳವನಾಗಿದ್ದಾನೆ ಎಂಬದಾಗಿದೆ. ಆತನು ಮಾನವರನ್ನು ಪಶ್ಚಾತ್ತಾಪಕ್ಕೆ ನಡೆಸುವ ಕಾರ್ಯವನ್ನು ಮಾಡುತ್ತಾ ಇದ್ದಾನೆ ಮತ್ತು ಇನ್ನು ತಾನು ಕಾಯಬಾರದು ಎಂದು ಯೋಚಿಸುವ ಸಮಯದ ತನಕ ಕಾಯುತ್ತಾ ಇದ್ದಾನೆ. ಆದಿ 6:3 ರೊಂದಿಗೆ ಹೋಲಿಸಿ ನೋಡಿರಿ. **9**

**3:9** *"ಯಾವನಾದರೂ ನಾಶವಾಗುವದು ಆತನಿಗೆ ಇಷ್ಟವಿಲ್ಲ"*– ಯೆಹೆಜ್ಕೇಲ 18:32; 1 ತಿಮೊ 2:4; ಯೋಹಾನ 3:16. ಮಾನವರೆಲ್ಲರೂ ಪಶ್ಚಾತ್ತಾಪಪಡಬೇಕು ಎಂಬದು ದೇವರ ಬಯಕೆಯಾಗಿದೆ – ಅಪೊ 17:30.

*"ಪಶ್ಚಾತ್ತಾಪ"*– ಮತ್ತಾಯ 3:2. **10**

**3:10** *"ಕರ್ತನ ದಿನ"*– ಯೆಶಾಯ 2:12; 13:6-13; ಯೋವೇಲ 2:1-2,30,31; ಜೆಫ 1:14-18; ಅಪೊ 2:20; 1 ಥೆಸ 5:2; 2 ಥೆಸ 2:2 ರ ನೋಟ್ಸ್ ನೋಡಿರಿ. ಸತ್ಯವೇದದಲ್ಲಿ "ದಿನ" ಎಂಬ ಪದ ಅಕ್ಷರಾರ್ಥವಾಗಿ ಒಂದು ದಿನ ಎಂಬದನ್ನು ಅವಶ್ಯಕವಾಗಿ ಸೂಚಿಸುವದಿಲ್ಲ. ಆದಿ 2:2; ಯೆಶಾಯ 34:8; ಯೋಹಾನ 9:4; 1 ಥೆಸ 5:5,8 ನೋಡಿರಿ. ರಕ್ಷಣೆಯ "ದಿನ" (2 ಕೊರಿಂಥ 6:2) ಪೌಲನ ದಿನದಿಂದ ನಮ್ಮ ದಿನದ ತನಕ, ಸುಮಾರು ಎರಡು ಸಾವಿರ ವರ್ಷಗಳು ಮುಂದುವರೆಯುತ್ತಾ ಬಂದಿದೆ. ಕರ್ತನ "ದಿನ" –ಸಮಯದ ಅವಧಿಯು ಬಹುಶಃ ಸಾವಿರ ವರ್ಷಗಳು ಅಥವಾ ಅಧಿಕವಾಗಿರಬಹುದು ಅಂದರೆ ಯೇಸು ಕ್ರಿಸ್ತನ ಬರೋಣದಿಂದ ಪ್ರಾರಂಭವಾಗಿ ಪ್ರಕ 20:11-15 ರ ಮುಕ್ತಾಯವಾಗುವದು.

*“ಕಳ್ಳನು ಬರುವಂತೆ”*– 1 ಥೆಸ 5:1-3; ಪ್ರಕ 3:3; 16:15. **11**

**3:11** *“ಇವೆಲ್ಲವುಗಳು ಹೀಗೆ”*– ನಾಶನಕ್ಕೆ ಗುರಿಯಾಗುವ ಲೋಕದ ಕಾರ್ಯಗಳಿಗಾಗಿ ಜೀವಿಸುವದು ಸಮಂಜಸವಾಗಿದೆಯೇ? 1 ಯೋಹಾನ 2:15-17 ರೊಂದಿಗೆ ಹೋಲಿಸಿ ನೋಡಿರಿ.

*“ಪರಿಶುದ್ಧವಾದ ನಡವಳಿಕೆ ಮತ್ತು ಭಕ್ತಿ”*– ತೀತ 2:11-14; 1 ಪೇತ್ರ 1:15; 1 ಯೋಹಾನ 1:6. **12**

**3:12** *“ದೇವರ ದಿನ”*– ವ 10; 1 ಕೊರಿಂಥ 1:18; 3:13; 5:5; 2 ಕೊರಿಂಥ 1:14; ಫಿಲಿಪ್ಪಿ 1:6. ವಿಶ್ವಾಸಿಗಳು ಅದರ ಬರೋಣವನ್ನು ತ್ವರೆಪಡಿಸುವದು ಹೇಗೆ, ಅಂದರೆ, ಆ ದಿನ ಬೇಗ ಬರುವಂತೆ ಮಾಡುವದು ಹೇಗೆ? ಕರ್ತನಾದ ಯೇಸು ಕ್ರಿಸ್ತನು ಮಾಡಲು ಹೇಳಿರುವ ಕಾರ್ಯಗಳನ್ನು ಮಾಡಿದರೆ ಆ ದಿನವು ಬೇಗ ಬರುತ್ತದೆ. ಆತನು ನಮಗೆ ಆತನ ರಾಜ್ಯವು ಬರಲಿ ಎಂದು ಪ್ರಾರ್ಥಿಸುವಂತೆ ಆಜ್ಞಾಪಿಸಿದ್ದಾನೆ (ಮತ್ತಾಯ 6:10) ಮತ್ತು ಆತನ ಸುವಾರ್ತೆಯನ್ನು ಲೋಕದ ಕಟ್ಟಕಡೆಗೆ ಸಾರುವಂತೆ ಹೇಳಿದ್ದಾನೆ (ಮತ್ತಾಯ 28:19; ಮಾರ್ಕ 16:15). ಆತನ ಸಭೆ ಅದರ ಕಾರ್ಯವನ್ನು ಮುಗಿಸುವಾಗ ಈ ಯುಗದ ಸಮಾಪ್ತಿಯ ಸಮಯವು ಬರುತ್ತದೆ (ಮತ್ತಾಯ 24:14).

*“ಬೆಂಕಿ”*– ವ 7. ಪೇತ್ರನು ನಮಗೆ ಭವಿಷ್ಯದಲ್ಲಿ ನಡೆಯುವ ಕಾರ್ಯಗಳ ವೇಳಾಪಟ್ಟಿಯನ್ನು ಕೊಟ್ಟಿಲ್ಲ. ಆತನ ಭಾಷೆ ಯೇಸು ಕ್ರಿಸ್ತನು ಹಿಂದಿರುಗಿ ಬರುತ್ತಾನೆ ಮತ್ತು ಮಾನವರ ಅಂತಿಮ ನ್ಯಾಯತೀರ್ಪಿಗೂ ಮೊದಲು ಸಾವಿರ ವರ್ಷಗಳು ಆಳ್ವಿಕೆ ಮಾಡುತ್ತಾನೆ ಹಾಗೂ ಭೂಮ್ಯಾಕಾಶಗಳ ನಾಶನವನ್ನು ಪೂರ್ಣಗೊಳಿಸುತ್ತಾನೆ ಎಂಬ ಸಾಧ್ಯತೆಯನ್ನು ಅಲ್ಲಗಳೆಯುವದಿಲ್ಲ (ಪ್ರಕ 20:1-6). ಸಾವಿರ ವರ್ಶಗಳ ಮೊದಲು ಮತ್ತು ನಂತರ ಘೋರವಾದ ಶಿಕ್ಷೆ ವಿಧಿಸಲಾಗುತ್ತದೆ – 2 ಥೆಸ 1:7; ಯೆಶಾಯ 24:6-13; 29:6; 30:30; ಪ್ರಕ 16:8-9; 20:9,14,15. **13**

**3:13** *“ನೂತನಾಕಾಶಮಂಡಲ, ನೂತನಭೂಮಂಡಲ”*– ಯೆಶಾಯ 65:17; ಪ್ರಕ 21:1.

*“ಅವುಗಳಲ್ಲಿ ನೀತಿಯು ವಾಸವಾಗಿರುವದು”*– ಪ್ರಕ 21:27; 22:14-15; ಕೀರ್ತನೆ 15:1-5; 89:14; 118:19; ಯೆಶಾಯ 11:4-5; 1 ಕೊರಿಂಥ 6:9-10. ನಿಜವಾದ ನೀತಿ, ದೇವರ ನೀತಿಯನ್ನು ಕುಗ್ಗಿಸಲಾಗುತ್ತಿರುವ, ಹಿಂಸಿಸಲಾಗುತ್ತಿರುವ ಈ ಲೋಕಕ್ಕಿಂತ ಅದು ಸಂಪೂರ್ಣ ಭಿನ್ನವಾಗಿರುವದು. **14**

**3:14** ದಾನಿ 12:10; 1 ಕೊರಿಂಥ 1:8; ಎಫೆ 1:4; 4:3; 5:27; ಫಿಲಿಪ್ಪಿ 1:10; 2:15; 1 ಥೆಸ 5:23; ಇಬ್ರಿ 12:14. ಆತನು ಹೇಳಿರುವ ಹಾಗೆ ನಾವು ಜೀವಿಸುವದಾದರೆ, ಆತನ ಬರೋಣವನ್ನು ಸಂತೋಷ ಮತ್ತು ಆತ್ಮವಿಶ್ವಾಸದಿಂದ ಎದುರುನೋಡುವವರಾಗಿರುತ್ತೇವೆ. **15**

**3:15** *“ತಾಳ್ಮೆ”*– ವ 9.

*“ಪೌಲ”*– ಅವನು ರೋಮಾ 2:4; 3:25-26; 9:22-23; 10:21 ರಲ್ಲಿ ದೇವರ ತಾಳ್ಮೆಯ ಬಗ್ಗೆ ಬರೆದಿದ್ದಾನೆ. ಪೇತ್ರನು ಆ ಪತ್ರಿಕೆಯನ್ನು ಸೂಚಿಸುತ್ತಾ ಇರಬಹುದು. **16**

**3:16** *“ತಿಳಿಯುವದಕ್ಕೆ ಕಷ್ಟವಾಗಿವೆ”*– ಪೌಲನ ಪತ್ರಿಕೆಗಳಲ್ಲಿ ಕಷ್ಟದ ವಿಷಯಗಳು ಮತ್ತು ಕಷ್ಟದ ಮಾತುಗಳು ಇವೆ (ಉದಾಹರಣೆಗೆ, ರೋಮಾ ಪತ್ರಿಕೆಯ ಕೆಲವು ಭಾಗಗಳು). ಅಧಿಕವಾದ ಅಧ್ಯಯನ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ, ದೇವರಾತ್ಮನು ಕೊಡುವ ಜ್ಞಾನ ಮತ್ತು ತಿಳುವಳಿಕೆಯಿಲ್ಲದೆ ಹೋದರೆ, ಅವುಗಳನ್ನು ಅರ್ಥಮಾಡಿಕೊಳ್ಳಲು ನಮ್ಮಿಂದ ಆಗುವದಿಲ್ಲ.

*“ತಪ್ಪಾಗಿ ಅರ್ಥಮಾಡಿಕೊಳ್ಳುವವರು”*– ಇದು ಅವಿದ್ಯಾವಂತರು ಎಂಬದಕ್ಕಿಂತ ಉತ್ತಮವಾದ ಭಾಷಾಂತರ ಎನಿಸುತ್ತದೆ. ವಿದ್ಯಾಭ್ಯಾಸದ ಕೊರತೆ ಜನರು ಸತ್ಯವೇದವನ್ನು “ತಿರುಚುವಂತೆ” ಮಾಡುವದಿಲ್ಲ ಬದಲಾಗಿ ದೇವರು ಮತ್ತು ದೇವರ ವಾಕ್ಯವನ್ನು ಹೇಗೆ ಅಧ್ಯಯನ ಮಾಡಬೇಕು ಹಾಗೂ ಅರ್ಥಮಾಡಿಕೊಳ್ಳಬೇಕು ಎಂಬದು ಗೊತ್ತಿಲ್ಲದಿರುವದು ತಿರುಚುವಂತೆ ಮಾಡುತ್ತದೆ.

*“ಚಪಲಚಿತ್ತರು”*– 2:14; ಯಾಕೋಬ 1:8 – ಸತ್ಯದಲ್ಲಿ ಸ್ಥಿರವಾಗಿ ನಿಲ್ಲಲು ಆಗದವರು (ಕೊಲೊ 1:23; 4:12; 1 ಥೆಸ 3:8; 2 ಥೆಸ 2:15; 1 ಪೇತ್ರ 5:9-10).

*“ತಪ್ಪಾದ ಅರ್ಥ ಕೊಡುತ್ತಾರೆ”*– ಅಪೊ 20:30; 2 ಕೊರಿಂಥ 4:2; ಗಲಾ 1:7; ಯೆರೆ 23:36. ಪೌಲನ ಬರಹಗಳು (ಮತ್ತು ಇಡೀ ಸತ್ಯವೇದವು) ಅಂಥವರ ಕೈಗಳಲ್ಲಿ ಬಹಳವಾಗಿ ನಲುಗಿದೆ – ಅವರಲ್ಲಿ ಅನೇಕರು ಹೆಚ್ಚು ವಿದ್ಯಾವಂತರಾಗಿದ್ದಾರೆ.

*“ಮಿಕ್ಕಾದ ಗ್ರಂಥಗಳು”*– ಪೌಲನು ಅವರಿಗೆ ಬರೆದಿರುವ ವಿಷಯಗಳನ್ನು ಪೇತ್ರನು ಮಾನಿಸುತ್ತಾ ಇರುವದನ್ನು ಗಮನಿಸಿರಿ (ಅವುಗಳು ಪವಿತ್ರಾತ್ಮನ ಪ್ರೇರಣೆಯಾಗಿವೆ ಎಂಬದನ್ನು ಪೇತ್ರನು ಅಂಗೀಕರಿಸಿಕೊಂಡಿದ್ದನು – 1:20-21).

*“ತಮಗೆ ನಾಶವನ್ನುಂಟು ಮಾಡಿಕೊಳ್ಳುತ್ತಾರೆ”*– 2:1,3; 2 ಥೆಸ 2:10. ನಾವು ದೇವರ ಪ್ರಕಟನೆಗಳನ್ನು ಹೇಗೆ ತೆಗೆದುಕೊಳ್ಳುತ್ತೇವೆ ಎಂಬ ವಿಷಯದಲ್ಲಿ ಹೆಚ್ಚು ಜಾಗರೂಕತೆಯುಳ್ಳವರಾಗಿರಬೇಕು. ಒಂದುವೇಳೆ ನಾವು ಆತನ ಬೋಧನೆಗಳನ್ನು ತಿರುಚಿದರೆ ಮತ್ತು ಕೆಡಿಸಿದರೆ ಮತ್ತು ನಮ್ಮ ಮನಸ್ಸಿಗೆ ಬಂದ ಹಾಗೆ ನಡೆದುಕೊಂಡರೆ ಆತನು ಕೊಡವ ದಂಡನೆಯಿಂದ ತಪ್ಪಿಸಿಕೊಳ್ಳಲು ಆಗುವದಿಲ್ಲ. **17**

**3:17** *“ಎಚ್ಚರಿಕೆಯಾಗಿರಿ”* ಅಥವಾ *“ಜಾಗರೂಕರಾಗಿರಿ”*– ಮತ್ತಾಯ 10:17; 16:6; ಮಾರ್ಕ 13:9,23,33; ಅಪೊ 20:31; 1 ಕೊರಿಂಥ 16:13.

*“ದುಷ್ಟರು”*– ಅಥವಾ “ಅಧರ್ಮಿಗಳು” – 2:7-8; 2 ಥೆಸ 2:3,7-9; 1 ಯೋಹಾನ 3:4; ಯೂದ 4; 1 ಕೊರಿಂಥ 9:21; ಯಾಕೋಬ 2:8.

*"ಸಿಕ್ಕದಂತೆ"*– 1:10; 1 ಕೊರಿಂಥ 10:12. **18**

**3:18** *"ಅಭಿವೃದ್ಧಿ"*– ಎಫೆ 4:12-15; 1 ಪೇತ್ರ 2:2.

*"ಕೃಪೆ"*– ತೀತ 2:11-14 ನೋಡಿರಿ. ನಾವು ಕೃಪೆಯಲ್ಲಿ ಮತ್ತು ಕೃಪೆಯು ಕಲಿಸುವ ವಿಷಯಗಳಲ್ಲಿಯೂ ಅಭಿವೃದ್ಧಿಯಾಗಬೇಕು. ಇದುವೇ ಯೇಸು ಕ್ರಿಸ್ತನ ಕೃಪೆಯಾಗಿದೆ ಮತ್ತು ಅದರಲ್ಲಿ ಅಭಿವೃದ್ಧಿಯಾಗುವದು ಆತನಂತೆ ಅಭಿವೃದ್ಧಿಯಾಗುವದಾಗಿದೆ.

*"ಜ್ಞಾನ"*– ಎಫೆ 1:17; 3:18-19; ಫಿಲಿಪ್ಪಿ 3:10; ಕೊಲೊ 1:9; 2:2. ಯೇಸು ಕ್ರಿಸ್ತನನ್ನು ಉತ್ತಮವಾಗಿ ತಿಳಿಯಲು ಮತ್ತು ಆತನ ಹಾಗೆ ಆಗಲು – ಇದು ಪ್ರತಿಯೊಬ್ಬ ವಿಶ್ವಾಸಿಯ ಪ್ರಮುಖ ಗುರಿಯಾಗಿರಬೇಕು.

*"ಆತನಿಗೆ ಸದಾಕಾಲವೂ ಸ್ತೋತ್ರ"*– ಸ್ತೋತ್ರಗಳು ಯೇಸು ಕ್ರಿಸ್ತನಿಗೇ ಸಲ್ಲುತ್ತವೆ ಎಂಬದು ಪೇತ್ರನಿಗೆ ಗೊತ್ತಿದೆ. ದೇವರು ಮಾತ್ರವೇ ಈ ಸ್ತೋತ್ರಗಳಿಗೆ ಯೋಗ್ಯನಾಗಿದ್ದಾನೆ. ಯೆಶಾಯ 42:8; ರೋಮಾ 11:36; 16:27. ಯೇಸು ಕ್ರಿಸ್ತನು ಇದಕ್ಕೆ ಯೋಗ್ಯನಾಗಿದ್ದಾನೆ ಯಾಕಂದರೆ ಆತನು ದೇವರ ಪ್ರತಿರೂಪವಾಗಿದ್ದಾನೆ.